ಹಳೆಹಳ್ಳಿಯಲ್ಲಿ ಹರಿಜನರ ಮೇಲೆ ಅಮಾನುಷ ಹಲ್ಲೆ

ವರದಿ : ನಮ್ಮ ವಿಶೇಷ ಪ್ರತಿನಿಧಿಗಳಿಂದ

ಸರ್ಕಾರ ಎಂಥೆಂಥ ಬಿಗಿ ಕ್ರಮ ತೆಗೆದುಕೊಳ್ಳುತ್ತಿದ್ದರೂ ಇಂದು ಸವರ್ಣೀಯರು ಹರಿಜನರ ಮೇಲೆ ಅಮಾನುಷವಾಗಿ ಕೊಲೆ ಸುಲಿಗೆ ಹಿಂಸಾಚಾರಗಳನ್ನು ನಡೆಸುತ್ತಲೇ ಇದ್ದಾರೆ. ಹಳ್ಳಿಗಳಲ್ಲಿ ನಡೆವ ಎಂಥವೆ ಭಯಾನಕವಾದ ದೌರ್ಜನ್ಯಗಳು ಸ್ಥಳೀಯ ಮುಖಂಡರುಗಳ ಮತ್ತು ಯಾವಾಗಲೂ ಹಣಅಧಿಕಾರದಹಿಂದಿರುವ ಪತ್ರಿಕೆಗಳಿಂದ ನಿಜಸ್ಥಿತಿ ಹೊರಗೆ ಬರದೆ ಗೋಪ್ಯವಾಗಿ ಉಳಿದುಬಿಡುತ್ತಿವೆ. ಇದೆಲ್ಲದರಿಂದ ಸವರ್ಣೀಯರ ಅಟ್ಟಹಾಸಕ್ಕೆ ಯಾವ ಅಡೆತಡೆಯೂ ಇಲ್ಲದೆ ಹರಿಜನರ ಮೇಲೆ ಅಮಾನುಷವಾಗಿ ಹಿಂಸೆ,ದಮನಗಳನ್ನು ನಡೆಸುತ್ತಿದ್ದಾರೆ.



ಸವರ್ಣೀಯರ ಬಲಿಪಶುಗಳು



ಹರಿಜನರಿಷ್ಟೇ ಜನ...?

ಇಂಥದೇ ಒಂದು ದುರಂತ ಮಂಡ್ಯ ಜಿಲ್ಲೆ,ಮದ್ದೂರು ತಾಲ್ಲೂಕು, ಹಳೆಹಳ್ಳಿಯಲ್ಲಿ ನಡೆದಿದೆ. ಈ ದೌರ್ಜನ್ಯ ನಡೆಸಿದ ಸವರ್ಣೀಯರಿಗೆ ಅಲ್ಲಿನ ಎಂ ಎಲ್ ಎ ಬಿಳೀಗೌಡರ ಬೆಂಬಲ ಇದ್ದು, ನಡೆದಿರುವ ದೌರ್ಜನ್ಯದ ಸುದ್ದಿ ಮಂಡ್ಯವನ್ನೂ ಸರಿಯಾಗಿ ಮುಟ್ಟದಿರುವುದಕ್ಕೆ ಇವರ ಕೈವಾಡವೇ ಕಾರಣವಾಗಿದೆ ಎಂಬ ಸುದ್ದಿಯೂ ಇದೆ. ಏಪ್ರಿಲ್೧೭ರಿಂದ ೨೨ರವರೆಗೆ ಸತತವಾಗಿ ನಡೆಯಿತೆನ್ನಲಾದ ಈ ಭಯಂಕರ ದೌರ್ಜನ್ಯದಿಂದ ಅಲ್ಲಿನ ಬಡ ಹರಿಜನರು ಪ್ರಾಣಭಯದಿಂದ ಇನ್ನೂ ನಡುಗುತ್ತಿರುವರು.

ಸುಮಾರು ಐನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸವರ್ಣೀಯರಿರುವ ಇಲ್ಲಿ ಮಕ್ಕಳುಮರಿಗಳನೆಲ್ಲ ಸೇರಿಸಿದರೂ ಹರಿಜನರ ಸಂಖ್ಯೆ ಬರಿ ಅರವತ್ತೊಂದು.

ಅವರು ಭಯದಿಂದ, ದುಃಖದಿಂದ, ಏನೂ ಮಾಡಲಾಗದ ಹತಾಶ ಭಾವನೆಯಿಂದ ಗಂಟಲಿನಿಂದ ದನಿಯೇ ಹೊರಡದೆ ತಡೆದೂತಡೆದು ಹೇಳುವ ರೀತಿಯಲ್ಲಿಯೆ ನಡೆದ ದುರಂತದ ಕರಾಳ ರೂಪ ಬಂದು ನಿಲ್ಲುತ್ತಿತ್ತು. ಆ ದಿನಗಳಲ್ಲಿ ಗಂಡಸು, ಹೆಂಗಸರು,ಮಕ್ಕಳೆನ್ನದೆ,ಹೊಳೆದಂಡೆ,ಜಮೀನು ಎಲ್ಲೆಂದರಲ್ಲಿ ಸಿಕ್ಕಲ್ಲಿ ಹಿಡಿದು ಅಮಾನುಷವಾಗಿ ಥಳಿಸಿದ್ದಾರೆ. ಮನೆಗಳಿಗೆ ನುಗ್ಗಿ ಹೊಡೆದು ತಣಿಗೆ ತಪ್ಪಲೆ ಹಣವನ್ನು ಲೂಟಿಮಾಡಿದ್ದಾರೆ. ನೇಗಿಲು ನೊಗ ಸಮೇತ ಗಾಡಿಗಳನೆಲ್ಲ ಸುಟ್ಟು ಹಾಕಿದ್ದಾರೆ. ಪೋಲೀಸ್ ಕಂಪ್ಲೇಂಟ್ ಕೊಟ್ಟಾಗ ಅವರು ಬಂದು ಸಮಾಧಾನ ಹೇಳಿ ಹೋದರೆಂದು ತಿಳಿದು ಬಂದಿದ್ದು, ಸವರ್ಣೀಯರ ರೀತಿ ನಡೆಯಲ್ಲಿ ಇನ್ನೂ ದ್ವೇಷದ ಬಿಸಿ ವಾತಾವರಣವೇ ಇದ್ದು ಹರಿಜನರೆಲ್ಲಾ ಮುಂದೇನು ವಿಪತ್ತು ಕಾದಿದೆಯೋ ಎಂದು ಗೋಳಿಡುತ್ತಿದ್ದಾರೆ.

ದೌರ್ಜನ್ಯಕ್ಕೆ ಮುಂಚೆ

ನಾಗಮಂಗಲ ತಾಲ್ಲೂಕು ನಾಗತಹಳ್ಳಿ ಎಂಬ ಗ್ರಾಮದಲ್ಲಿ ಹಳೇಹಳ್ಳಿಯ ಸವರ್ಣೀಯರಸಂಬಂಧಿಗಳು ಇದ್ದು ಅವರು ತಮ್ಮ ಊರಿನ ಹಬ್ಬಕ್ಕೆ ಹಳೇಹಳ್ಳಿಯ ಹರಿಜನರನ್ನು ತಮಟೆಬಡಿಯಲು ಕಳಿಸಿಕೊಡಿ ಎಂದು ತಮ್ಮ ಸಂಬಂಧಿಗಳನ್ನು ಕೇಳಿ ಅವರಿಂದ ಅಗಲಿ ಅನ್ನಿಸ್ಕೊಂಡು ಹೋದರು. ಇದು ಆಗ ಹರಿಜನರಿಗೆ ಗೊತ್ತಿರಲಿಲ್ಲ. ಇವರ ಕೇಳದೆ ಹೇಳದೆ ಸವರ್ಣೀಯ ಮುಖಂಡರು ಕಳಿಸಿಕೊಡಲು ಒಪ್ಪಿಕೊಂಡಿದ್ದರು.

ಇದು ಹರಿಜನರಿಗೆ ತಿಳಿದದ್ದು ಹಬ್ಬ ಎರಡು ದಿನ ಇದೆ ಅನ್ನುವಾಗ. ಅವತ್ತು ಊರಿನ ಸವರ್ಣೀಯ ಮುಖಂಡರು ಇವರನ್ನು ಕರೆಸಿ ವಿಷಯ ತಿಳಿಸಿ ತಮಟೆ ಬಡಿಯಲು ಕೇಳಿದರು. ಅದಕ್ಕೆ ಹರಿಜನರು ಆಗುವುದಿಲ್ಲ ಅಂತಲೂ ಮತ್ತು ನಮ್ಮನ್ನು ಒಂದು ಮಾತಾದರೂ ಕೇಳದೆ ಒಪ್ಪಿಕೊಂಡದ್ದು ಸರಿಯಲ್ಲ ಎಂದು ತಮಟೆ ಬಡಿಯಲು ನಿರಾಕರಿಸಿದರು. ಆದರೂ ಮುಖಂಡರು ರೇಗಿ ಒಪ್ಪಿಕೊಂಡದ್ದಂತೂ ಆಗಿದೆ ತಮಟೆ ಬಡಿಯಿರಿ ಎಂದು ಒತ್ತಾಯ ಮಾಡಿದರು. ಅವರ ಒತ್ತಾಯಕ್ಕೆ ಹರಿಜನರು 'ಹಣ ಕೊಟ್ಟರೆ ಬರುತ್ತೇವೆ' ಎಂದು ಹೇಳಿದರೆಂತಲೂ, ಆದರೆ ಸವರ್ಣೀಯರು 'ಹಿಂದೆ ಹೀಗೆ ಕೊಟ್ಟಿಲ್ಲ' ಎಂದದ್ದೂ, ಹರಿಜನರು 'ಈಗ ಕೊಡಬೇಕು'

ಎರಡನೆಯ ಪುಟ ನೋಡಿ

ಪಂಚಮ

ಸಂಪುಟ : 1 | ಶನಿವಾರ, 15-5-1976 | ಬೆಲೆ : 20 ಪೈಸೆ | ಸಂಚಿಕೆ : 2

ದೌರ್ಜನ್ಯ, ಸಂಧಾನ ಎರಡೂ ಸವರ್ಣೀಯರಿಂದಲೆ

ವರದಿ : ನಮ್ಮ ವಿಶೇಷ ಪ್ರತಿನಿಧಿಗಳಿಂದ

ಹರಿಜನರ ಮೇಲೆ ನಡೆಯುವ ದೌರ್ಜನ್ಯಗಳು ಎಲ್ಲಾ ವಟ್ಟದಲ್ಲಿಯೂ ಮುಚ್ಚಿ ಹೋಗವ ವ್ಯವಸ್ಥೆ ಈಗ ಇವೆ. ಹರಿಜನರನ್ನು ಕೊಂದೂ ಒಬ್ಬ ಸವರ್ಣೀಯ ಹಾಯಾಗಿ ಬದುಕಬಹುದು. ಏಕೆಂದರೆ ತನ್ನವರೇ(ಸವರ್ಣೀಯರು)ಎಲ್ಲ ಮಟ್ಟದಲ್ಲೂ ಅಧಿಕಾರದಲ್ಲಿರುತ್ತಾರೆ. ಹಳೇಹಳ್ಳಿಯ ಹರಿಜನರಿಗೆ ಮಾರ್ಚಿ 21ರಿಂದಲೂ ಭಯಭೀತಿ ಉಂಟುಮಾಡಿರುವ ಸವರ್ಣೀಯರ ದೌರ್ಜನ್ಯ ಕೊನೆಯಾಗುತ್ತದೆ ಎನ್ನುವ ನಂಬಿಕೆಯೇ ಇಲ್ಲ. ಅಲ್ಲಿನ ಎಂ.ಎಲ್.ಎ, ಲಾಯರ್ ಮುಂತಾದವರಿಂದಲೇ ಈ ದೌರ್ಜನ್ಯಕ್ಕೆ ಬೆಂಬಲ ಸಿಕ್ಕಿರುವುದರಿಂದ 'ನಾವಿಲ್ಲಿ ಬದುಕುವುದೇ ಕಷ್ಟ' ಎನ್ನುತ್ತಾರೆ. ಈ ಕಾರಣದಿಂದಾಗಿಯೇ ಇಲ್ಲಿ ನಡೆದ ದೌರ್ಜನ್ಯ ಹೊರಗೆ ಬರುತ್ತಿಲ್ಲ.

ಮೇ 3 ರಂದು ಪತ್ರಿಕೆಗಳಲ್ಲಿ ಸುಮಾರಾಗಿ ೭೨ ಕೆ- ಕೊಂಡ ಈ ಸುದ್ದಿಯನ್ನು ಪೂರ್ತಿಯಾಗಿ ಅಳಿಸಿಬಿಡುವ ಕಾರ್ಯ ಅಲ್ಲಿ ನಡೆದಿದೆ. ದೌರ್ಜನ್ಯನಡೆಸಿದ ಸವರ್ಣೀಯರಿಂದಲೇ ಒಂದು ರೀತಿಯ 'ಶಾಂತಿ ಸಂಧಾನ ಸಭೆ' ನಡೆಯಿತು. ಭಯದಿಂದ ಹರಿಜನರು ಕಂಗಾಲಾಗಿದ್ದಾಗ ನಡೆದ ಈ ಸಭೆಯ ವೈಖರಿ:

ಸುಮಾರು ಸಾಯಂಕಾಲ 6 ಗಂಟೆಗೆ ಪ್ರಾರಂಭವಾದ ಸಭೆಯ ಆಧ್ಯಕ್ಷತೆ ಮಂಡ್ಯಾ ಜಿಲ್ಲೆಯ ಅಸಿಸ್ಟೆಂಟ್ ಕಮೀಷನರ್ ರವರದಾಗಿತ್ತು. ಸಭೆಯ ಇತರ ಮುಖ್ಯಸ್ಥರು.: ತಹಸಿಲ್ದಾರ್, ಬಿ.ಡಿ.ಒ, ಕೊಪ್ಪದ ಸಬ್ ಇನ್ಸ್‌ಪೆಕ್ಟರ್, ಎ.ಡಿ. ಬಿಳೀಗೌಡ ಎಂ ಎಲ್ ಎ, ಅರಳಕೆರೆಯ ಟಿ.ಚನ್ನೇಗೌಡ ಲಾಯರ್, ಕೌಡ್ಲೆಯ ಚಿಕ್ಕಚನ್ನೇಗೌಡ, ತರಿಕೆರೆಯ ಚೌಡಯ್ಯ,ನಗರಕೆರೆಯ ಚನ್ನಯ್ಯ, ಬಂಡಳ್ಳಿಯ ನಂಜಯ್ಯ, ಕೌಡ್ಲೆ ಪಂಚಾಯಿತಿ ಛೇರ್ಮನ್ ಟಿ.ಚೌಡಯ್ಯ, ತರಿಕೆರೆ ಕಾಲನಿಯ ಕೆ.ಟಿ. ರಾಮಸ್ವಾಮಿ, ಹಳೇಹಳ್ಳಿಯ ಪಂಚಾಯಿತಿ ಛೇರ್ಮನ್ ಕರೀಗೌಡ, ಕಾಡುಕೊತ್ತನಹಳ್ಳಿಯ ಬೋರಯ್ಯ(ಮಾಜಿ ಶೇಖ್ದಾರ್)

ಕೊನೆಯ ಪುಟ ನೋಡಿ

ಸವರ್ಣೀಯರ ಹದ್ದಿನ ಕಣ್ಣಿಗೆ ಸಿಕ್ಕ ಮುಗ್ಧರು

ಏಪ್ರಿಲ್ 17ರಿಂದ 22ರ ತನಕ ಸತತವಾಗಿ ನಡೆದ ದೌರ್ಜನ್ಯದಲ್ಲಿ ಪದೇಪದೇ ಸವರ್ಣೀಯರ ಕ್ರೂರ ಕಣ್ಣಿಗೆ ಬೀಳುತಿದ್ದವರೆಂದರೆ ಗೋವಿಂದರಾಜು, ಶಿವರಾಜು, ಚನ್ನಯ್ಯ, ಗುರುಸ್ವಾಮಿ ಎಂಬ ಹುಡುಗರುಗಳು. ಅದಕ್ಕೆ ಕಾರಣ ಹಿಂಗಿದೆ: ಈ ಹುಡುಗರು ಓದುತ್ತಿರುವ ಹುಡುಗರಾಗಿದ್ದು, ಈ ಅಕ್ಷರ ತಿಳಿದ ಹೈಕಳು ಪೋಲೀಸು ಗೀಲೀಸು ಅಂತ ಎಲ್ಲಿ ತಿರುಗಿ ಬೀಳುತ್ತವೊ ಎನ್ನುವ ಭಯ ಅವರಿಗೆ ಇದೆ. ಅದರಿಂದಲೇ ಅವರಿಗೆ ಈ ಸಂದರ್ಭದಲ್ಲಿ ಆ ಹುಡುಗರುಗಳು ಎದ್ದು ಕಂಡರು. ಅವತ್ತು ರಾತ್ರಿ ಹಟ್ಟಿಟ್ಟಿ ಬಾಗಿಲುಗಳನ್ನ ಹಾರೆ, ಕೊಡಲಿಗಳಿಂದ ಬಡಿದು ಲೂಟಿ ಮಾಡುತ್ತಿರುವ ಗುಂಪಿನಿಂದ ಈ ಹುಡುಗರ ಹೆಸರುಗಳೂ, ಹಿಡೀರಿ 'ಟಗರುಮರಿಗಳ' ಕತ್ತರಿಸಿ, ಬಡೀರಿ ಅನ್ನುವುದೂ ಕೇಳಿಸುತ್ತಿತ್ತು. ಇದ ಒಳಗಿಂದಲೇ ಕೇಳಿದ ಗೋವಿಂದರಾಜುವಿನ ಅಪ್ಪ ಅವ್ವ ಗಡಗಡ ನಡುಗಿ, ಆಕಡೆ ಈಕಡೆ ಸವರ್ಣೀಯರೆಲ್ಲ ಓಡಾಡುತ್ತಿದ್ದಾಗ ಈ ಹುಡುಗನಿಗೆ ಸೀರೆ ಉಡಿಸಿ ಹಳೆಹಳ್ಳಿಗೆ ಸ್ವಲ್ಪ ದೂರದಲ್ಲಿರುವ 'ಕಾಲನಿ'ಗೆ ಮರೆಮಾಚಿ ಕಳಿಸಿ ಆವನ ಪ್ರಾಣವುಳಿಸಬೇಕಾಯಿತು ಎಂದು ಅವರುಗಳು ಗೋಳಿಡುತ್ತಾರೆ. ಇನ್ನು ಮಿಕ್ಕ ಹುಡುಗರು ರಾತ್ರೋರಾತ್ರಿ ಗದ್ದೆ ಹೊಲ ಬಿದ್ದು ಪ್ರಾಣ ಉಳಿಸಿಕೊಂಡಿದ್ದಾರೆ. ಪ್ರಾಣಭಯದಿಂದ ನಡುಗಿ ಸುಸ್ತಾಗಿರುವ 15ರ ಗೋವಿಂದರಾಜು "ನಾನು ಇಲ್ಲಿರದಿಲ್ಲ...ಇಲ್ಲಿದ್ರೆ ಸಾಯಿಸಿಬಿಡ್ತಾರೆ" ಎನ್ನುತ್ತಾನೆ.

ಸವರ್ಣೀಯರ ಈ ದೌರ್ಜನ್ಯದಿಂದ ಹೆದರಿ ಕಕ್ಕಾಬಿಕ್ಕಿಯಾಗಿರುವ 20ರ ಕಾಡಮ್ಮ "ಬೇರೆಕಡೆ ತಿರುಪೆ ಮಾಡಿದರೂ... ಈ ಊರು ಬ್ಯಾಡಕಣಪ್ಪೊ" ಎಂದು ಕಣ್ಣೀರಿಡುತ್ತಾರೆ. ತಮ್ಮವರ ಫಸಲಿಗೆ ದನಗಳ ಬಿಟ್ಟು ನಾಶಮಾಡುತ್ತಿದ್ದಾಗ ಕಾಡಮ್ಮ ಕೇಳಿದ್ದಕ್ಕೆ ಅಮಾನುಷವಾಗಿ ಥಳಿಸಿದ್ದಾರೆ. ಅಲ್ಲದೆ ರಾಕ್ಷಸರ ಲೂಟಿಗೆ ಮೊದಲು ಸಿಕ್ಕಿದ್ದು ಇವರ ಗುಡಿಸಲೇ. 'ಆ ರಾಕ್ಷಸರ ಕೈಗೆ ಸಿಕ್ಕಿದ್ರೆ ನನ್ನ ಮಾನ ಪ್ರಾಣ ಏನೂ ಉಳಿತಿರಲಿಲ್ಲ' ಎನ್ನುವ ಕಾಡಮ್ಮ ಕಂಗಾಲಾಗಿದ್ದಾರೆ. ಅಲ್ಲದೆ ಕೇರಿಯೆಲ್ಲ ಲೂಟಿಯಾಗುತ್ತಿದ್ದಾಗ ರಾತ್ರೋರಾತ್ರಿ ಕಾಡುಬಿದ್ದು ಪ್ರಾಣ ಉಳಿಸಿಕೊಂಡು. ಮೊಟ್ಟಮೊದಲು ವಿಷಯವನ್ನು ಕೊಪ್ಪದ ಪೋಲಿಸ್ ಸ್ಟೇಷನ್ನಿಗೆ ತಲುಪಿಸಿದ ಇವಳ ಮೇಲೆ ಊರಿನ ಸವರ್ಣೀಯ ರಾಕ್ಷಸರ ಕಣ್ಣುಗಳೆಲ್ಲ ಇವೆ. ನನ್ನ ಮಡಗದಿಲ್ಲಕಣಪ್ಪೋ ಎಂದು ದುಃಖಿಸುವ ಕಾಡಮ್ಮನಿಗೆ ಪೋಲಿಸರ ರಕ್ಷಣೆ, ಸಂಧಾನ ಯಾವುದರಲ್ಲಿಯೂ ನಂಬುಗೆ ಇಲ್ಲ. 'ಸಂಧಾನ ಅಂತ ಮಾಡಿ ನಾಳೆ ನಮ್ಮ ಪ್ರಾಣತೆಗೆಯೋಕು ಯೇಸವಿಲ್ಲ' ಎಂದು ಕಣ್ಣೀರಿಡುತ್ತಾರೆ. ●



"ಈ ಊರಲ್ಲಿದ್ದರೆ ನನ್ನ ಮಾನ ಪ್ರಾಣ ಉಳಿಯುವುದಿಲ್ಲ" ಎನ್ನುವ ಕಾಡಮ್ಮ



ರಾಕ್ಷಸರ ಕಣ್ಣಿನ ಟಗರುಮರಿ ಗೋವಿಂದರಾಜ

ಮೊದಲ ಪುಟದಿಂದ

ಅಂದಾಗ ಖರ್ಚು ಕೊಡಲು ಒಪ್ಪಿಕೊಂಡರು. ಹೀಗೆ ಒಪ್ಪಿಕೊಂಡ ಹರಿಜನರು ತಮಟೆ ಬಡಿದು ಬಂದರೆಂದು ತಿಳಿದು ಬಂದಿದೆ.

ಎಲ್ಲದಕ್ಕೂ ಬಹಿಷ್ಕಾರ...

ನಾಗತಹಳ್ಳಿಹಬ್ಬ ಆದ ಹದಿನೈದು ಇಪ್ಪತ್ತು ದಿವಸಕ್ಕೆ (೧೭-೪-೭೬) ಹಳೇಹಳ್ಳಿಯ ಗ್ರಾಮ ದೇವತೆಯ ಹಬ್ಬ ಬಂತು. ಸವರ್ಣೀಯರು ಹಬ್ಬದ ಮುಹೂರ್ತಕ್ಕೆ ತಮಟೆ ಬಡಿಯಲು ಹರಿಜನರನ್ನು ಕರೆದಾಗ ಅವರು ತಮಟೆ ಬಡಿಯಲು ಹಣ ಕೊಡಬೇಕು ಅಂದಾಗ, ಹಿಂದೆ ನಾಗತಹಳ್ಳಿ ಹಬ್ಬದ ಸಮಯದಲ್ಲಿ ತಮ್ಮ ಮಾತಿಗೇ ಎದುರಾಡಿದ ಹರಿಜನರ ಮೇಲೆ ವಿಷ ಕಾರಿ ಒಳಗೊಳಗೇ ಕುದಿಯುತ್ತಿದ್ದ ಸವರ್ಣೀಯರ ಕೋಪಕ್ಕೆ ಈಗಿನದೂ ಸೇರಿಕೊಂಡು ಮುಂದಿನ ಲೂಟಿ, ಸುಲಿಗೆಗೆ ಸಿದ್ಧತೆ ನಡೆಸಿದರೆಂದು ಪಾಪದ ಜನರು ಹೇಳಿಕೊಂಡರು. ಅವತ್ತು ರಾತ್ರಿಯೇ ನ್ಯಾಯಕ್ಕೆ ಕರೆದು ಬಹಿಷ್ಕಾರ ಹಾಕಿದರೆಂದು ವಿವರಿಸಿದರು. ಅದು ಹಿಂಗಿದೆ: ಹೊಳೆಯ ನೀರನ್ನು ತೆಗೆದುಕೊಳ್ಳುವ ಹಾಗಿಲ್ಲ. (ಕುಡಿಯುವ ನೀರು ಹೊಳೆಯಲ್ಲಲ್ಲದೆ ಬೇರೆಲ್ಲೂ ಇಲ್ಲ.) ಅಂಗಡಿ, ವ್ಯಾಪಾರ ನಿಲ್ಲಿಸಿದರು. ಸವರ್ಣೀಯರ ಬೀದಿ, ಜಮೀನುಗಳಲ್ಲಿ ತಿರುಗಾಡುವಹಾಗಿಲ್ಲ.

ಇದಾದ ಮಾರನೆಯ ದಿನದಿಂದಲೇ ಹೊಡೆತ ಲೂಟಿ, ನಡೆಯತೊಡಗಿದವು. ಅವತ್ತಿನ ಹಬ್ಬಕ್ಕೆ ಹರಿಜನರ ಬಾಳೆ ಗೊನೆಗಳನ್ನು ಕಡಿದುಕೊಂಡರು. ಆಡು, ಕುರಿ ದನಗಳ ಬಿಟ್ಟು, ಬೆಳೆ ಮೇಯಿಸಿದರು. ಆಗ ಅಲ್ಲೇ ಇದ್ದ ಕಾಡಮ್ಮ ಎಂಬುವಳು ಇದೆಲ್ಲಾ ನೋಡಲಾರದೆ ತಡೆಯಲು ಹೋದಾಗ ಆಕೆಯನ್ನು ಕೆಳಕ್ಕೆ ಬೀಳಿಸಿ ಚೆನ್ನಾಗಿ ಥಳಿಸಿದರೆಂದೂ, ಆ ಘಟನೆಯನ್ನು ಆಕೆ ಕಣ್ಣೀರಿಟ್ಟು ಹೇಳುತ್ತಾಳೆ. ಆರಾತ್ರಿಯೇ ಗೋವಿಂದಯ್ಯ ಎಂಬುವರ ಗಾಡಿಚಕ್ರಗಳನ್ನ ಕಳಚಿಕೊಂಡು ಹೋಗಿದ್ದು, ಈಗಲೂ ಚಕ್ರವಿಲ್ಲದ ಗಾಡಿ ಮನೆ ಮುಂದೆ ಬಿದ್ದಿದೆ. ಇದಾದ ಮಾರನೆ ದಿನ ಸಿದ್ದೆಗೌಡ ಎಂಬುವರ ನೇತೃತ್ವದಲ್ಲಿ ಸುಮಾರು ೨೦ ಜನ ಸವರ್ಣೀಯರು ಹೊಳೆದಡದಲ್ಲಿದ್ದ ಕೀರೆ ಸೊಪ್ಪಿನ ಮಡಿಗಳನ್ನು ಅಗೆದು ಹಾಕಿದ್ದಾರೆ. ನಿಂಗಯ್ಯ ಮತ್ತು ಬಿಳಿಯಯ್ಯ ಎಂಬುವರು ಇದನ್ನು ಕಂಡು ಹತ್ತಿರ ಹೋದಾಗ ಅವರೆಲ್ಲರು ಅಟ್ಟಿಸಿಕೊಂಡು ಬಂದರೆಂದು ತಿಳಿಸಿದರು. ಈಗಲೂ ಕೀರೆ ಸೊಪ್ಪಿನ ಮಡಿಗಳು ಹಾಳು ಬಿದ್ದಿರುವುದನ್ನು ನೋಡಬಹುದು.

ಈ ಒಂದೊಂದು ಘಟನೆ ನಡೆದಾಗಲೂ ಪೋಲೀಸ್ ಕಂಪ್ಲೈಂಟ್ ಕೊಟ್ಟಿದ್ದು ಪೋಲಿಸರು ಬಂದು ಮಹಜರು ನಡೆಸಿ ಹೋಗಿದ್ದರೂ, ಮುಂದಿನ ದಿನ ನಡೆದ ಘಟನೆ ಇವೆಲ್ಲಕ್ಕಿಂತಲು ಅಮಾನುಷವಾಗಿದೆ.

ದಂಡು ಬಂತು ದಂಡು...

೨೨ರ ರಾತ್ರಿ ಸುಮಾರು ೯ಗಂಟೆ ಸಮಯ ಸವರ್ಣೀಯರು ಗುಂಪುಗುಂಪಾಗಿ ಕೊಡಲಿ ಮಚ್ಚುಗಳ ಸಮೇತ ಕಲ್ಲು ತೂರುತ್ತಾ ಹರಿಜನರ ಕೇರಿಗೆ ನುಗ್ಗಿದರು. ಮೊದಲು ಆ ಪುಂಡರ ಕಣ್ಣಿಗೆ ಬಿದ್ದದ್ದು ಕೇರಿಯ ಅಂಚಿನಲ್ಲೇ ಇರುವ ಕಾಡಮ್ಮನ ಗುಡಿಸಲು. ಬಾಗಿಲನ್ನು ಕಿತ್ತು ಒಳಗೆ ನುಗ್ಗಿದವರೆ ಕಾಡಮ್ಮನಿಗೆ ಚೆನ್ನಾಗಿ ಬಡಿದು, ಹೊಸ ಮನೆ ಕಟ್ಟಿಸಲು ಇಟ್ಟಿದ್ದ 80 ತೀರುಗಳು, ಬಾಗಿಲು ಕಿಟಕಿಗಳು, ಒಂದು ಸಾವಿರ ರೂ., ಇದಲ್ಲದೆ ಕಬ್ಬಿಣದ ನೇಗಿಲು, ಗಾಡಿ ಚೌಕಟ್ಟನ್ನೂ ಹೊತ್ತುಹೋದರೆಂದೂ, ಆ ರಾಕ್ಷಸರು ಬೇರೆ ಮನೆಗಳಿಗೆ ನುಗ್ಗಿದಾಗ ಆಕೆ ಅಲ್ಲಿಗೆ ಎರಡು ಮೈಲಿ ದೂರದಲ್ಲಿರುವ ತೌರುಮನೆಗೆ ಓಡಿಹೋಗಿ ಪ್ರಾಣ ಉಳಿಸಿಕೊಂಡೆನೆಂದು ಕಣ್ಣೀರಿಡುತ್ತಾಳೆ. ಮುಂದೆ ಆ ಗುಂಪು ಯಾವ ಮನೆಯನ್ನೂ ಬಿಡದೆ ಲೂಟಿಹೊಡೆದಿದೆ. ಮನೆಗಳಿಗೆ ನುಗ್ಗುವಾಗ ದಾರಂದಗಳಿಗೆ ಕೊಡಲಿ, ಹಾರೆಗಳಿಂದ ಹೊಡೆದಿರುವ ಗುರುತುಗಳು ಇನ್ನೂ ಇವೆ.

ದೂರು ಬಂದ ಮಾರನೆದಿನಕ್ಕೆ ಪೋಲಿಸ್ ಮಹಜರಿಗೆ ಬಂದರೆಂದು ತಿಳಿದು ಬಂದಿದೆ. ಮತ್ತು ಡಿ.ಎಸ್.ಪಿ., ಅಸಿಸ್ಟೆಂಟ್ ಕಮಿಷನರ್, ತಹಸೀಲ್‌ದಾರ್ ಮುಂತಾದ ಅಧಿಕಾರಿಗಳು ಬಂದು ಸಮಾಧಾನ ಹೇಳಿ ಹೋಗಿರುವರು. ●

ಅಳಲು

ಕಾರ್ಮಿಕರ ಬವಣೆ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಸೀನಿಯಾರಿಟಿ ಪ್ರಕಾರ ಮನೆಗಳನ್ನು ಕೊಡುತ್ತಿರುವುದು ಸರಿಯಷ್ಟೆ. ಹರಿಜನ ಕಾರ್ಮಿಕರಿಗೆ ಸೀನಿಯಾರಿಟಿಯಾಗಿದ್ದರು ಸಹಾ ಮನೆ ಸಿಕ್ಕದೆ ಇರುವುದು ತುಂಬಾ ಶೋಚನೀಯವಾಗಿದೆ. ಮನೆಗಳಿಗೆ ಅರ್ಜಿಗಳನ್ನು ಹಾಕಿದರೂ ಸಹಾ ಕುತಂತ್ರ ನಡೆದು ಮನೆಯಂತು ಸಿಗುವ ಭಾಗ್ಯ ಬಂದಿಲ್ಲ. ಇನ್ನು ವಸತಿ ಸೌಕರ್ಯ ಪಡೆದಿರುವ ಹರಿಜನರದು ಮತ್ತೊಂದು ಕಥೆ. ಉದಾ: ವೇಲೂರ್ ಷೆಡ್ಡಿನ ಒಂದೊಂದು ಲೈನಿನಲ್ಲಿ ಕೇವಲ ಒಂದು ನಲ್ಲಿಯನ್ನು ಮಾತ್ರ ಹಾಕಿದ್ದಾರೆ. ಇಲ್ಲಿ ನೀರನ್ನು ತೆಗೆದುಕೊಳ್ಳಲು ತುಂಬಾ ನೂಕುನುಗ್ಗಲು. ಇಂತಹ ಒಂದು ಸನ್ನಿವೇಶದಲ್ಲಿ ನಲ್ಲಿಕಟ್ಟೆಯನ್ನು ಹರಿಜನ ಮಹಿಳೆಯರು ಹತ್ತುವ ಹಾಗಿಲ್ಲ. ನಲ್ಲಿಕಟ್ಟೆಯನ್ನು ಹತ್ತಿದರೆ ಸವರ್ಣೀಯರಿಂದ ಬೈಗುಳ ಹಾಗೂ ಮಾರಾಮಾರಿ ಜಗಳ. ಸಾಮಾನ್ಯವಾಗಿ ಸುಮಾರು ಐದಾರು ವರ್ಷದಿಂದ ಇಲ್ಲಿ ಸವರ್ಣೀಯರಿಗೂ ಹರಿಜನರಿಗೂ ನೀರಿನ ಬಗ್ಗೆ ಜಗಳ, ಗಲಾಟೆ ನಡೆದಿರುವುದು ಲೆಕ್ಕವಿಲ್ಲದಷ್ಟು. ಹರಿಜನ ಮಹಿಳೆಯರನ್ನು ಮುಂದಲೆ ಎಳೆದು, ಹೊಡೆದು, ಬಾಯಿಗೆ ಬಂದಂತೆ ಬಯ್ದು, ಸೀರೆಯನ್ನು ಎಳೆದು, ಈ ರೀತಿ ನಲ್ಲಿಯ ನೀರಿನ ಸಲುವಾಗಿ ಹರಿಜನರಿಗೂ ಸವರ್ಣೀಯರಿಗೂ ದಿನಬೆಳಗಾದರೆ ಜಗಳ ತಪ್ಪುವುದಿಲ್ಲ. ಇದನ್ನು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ, ವಿಚಾರಿಸಿ ಈ ಕಷ್ಟವನ್ನು ಪರಿಹರಿಸಬೇಕು.

—ನೊಂದವರು

ನಡುನೀರಿನಲ್ಲಿ ಕೈಬಿಟ್ಟಂತೆ

ನಮ್ಮ ಸರಕಾರದ ಸಮಾಜ ಕಲ್ಯಾಣ ಇಲಾಖೆಯು ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಜುಲೈನಿಂದ ಮಾರ್ಚಿ ತಿಂಗಳವರೆಗೆ ಮಂಜೂರು ಮಾಡುತ್ತಿದೆ. ಆದರೆ ಇತ್ತೀಚೆಗೆ ಕೆಲವು ವರ್ಷಗಳಿಂದ ಏಪ್ರಿಲ್-ಮೇ ತಿಂಗಳುಗಳಲ್ಲಿಯೂ ಪರೀಕ್ಷೆ ಇರುತ್ತದೆ. ಈ ಅವಧಿಯಲ್ಲಿ ಸಾಮಾನ್ಯವಾಗಿ ನಗರದ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲೂ ಏಪ್ರಿಲ್-ಮೇ ತಿಂಗಳು ವಿದ್ಯಾರ್ಥಿವೇತನ ಬರುವುದಿಲ್ಲವೆಂದು ಹರಿಜನ ವಿದ್ಯಾರ್ಥಿಗಳಿಗೆ ಊಟ ನಿಲ್ಲಿಸಿಬಿಡುತ್ತಾರೆ. ಪರೀಕ್ಷೆ ಕಾಲದಲ್ಲಿ ಊಟಕ್ಕಾಗಿ ಹರಿಜನ ವಿದ್ಯಾರ್ಥಿಗಳ ಬವಣೆ ಹೇಳತೀರದು. ಈ ತೊಂದರೆಯಿಂದ ವ್ಯಾಸಂಗಕ್ಕೆ ಬಹಳ ಅಡ್ಡಿಯುಂಟಾಗುತ್ತಿದೆಯಲ್ಲದೆ "ನಮ್ಮನ್ನು ನಡು ನೀರಿನಲ್ಲಿ ಕೈಬಿಟ್ಟಂತಾಗುತ್ತಿದೆ". ಆದ್ದರಿಂದ ಸರ್ಕಾರ ಇತ್ತ ಗಮನಹರಿಸಿ ಪ್ರತಿವರ್ಷವೂ ಏಪ್ರಿಲ್-ಮೇ ತಿಂಗಳೂ ಕೂಡ ವಿದ್ಯಾರ್ಥಿವೇತನ ಜಾರಿಗೊಳಿಸಿ ನಮ್ಮ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಭಿನ್ನವಿಸಿಕೊಳ್ಳುತ್ತಿದ್ದೇನೆ.

—ಎಚ್. ಕೃಷ್ಣಸ್ವಾಮಿ

ಬಲವಂತದಿಂದ ಜೀತ ಮುಂದುವರಿದಿದೆ......

ಮಳವಳ್ಳಿ ತಾಲ್ಲೂಕಿಗೆ ಸಂಬಂಧಪಟ್ಟ ಕೆಲವು ಗ್ರಾಮಗಳಾದ ಮೇಗಳಾಪುರ, ನಂಜೇಗೌಡನದೊಡ್ಡಿ, ಗ್ರಾಮದೇವತೆಪುರ, ಚೆನ್ನಿಪುರ ಇನ್ನೂ ಮುಂತಾದ ಸ್ಥಳಗಳಲ್ಲಿ ಜೀತಪದ್ಧತಿ ಇನ್ನೂ ನಿಂತಿಲ್ಲ. ಜೀತದಿಂದ ಇನ್ನೂ ಮುಕ್ತರಾಗಿಲ್ಲ. ಇಪ್ಪತ್ತು ಅಂಶಗಳ ಕಾರ್ಯಕ್ರಮಗಳಲ್ಲಿ ಜೀತಪದ್ಧತಿಯೂ ಒಂದಾಗಿರುವುದು ಸಂತೋಷಕರವಾದ ವಿಷಯ. ಆದರೆ ಈ ಮೇಲೆ ತಿಳಿಸಿದ ಸ್ಥಳಗಳಲ್ಲಿ ಕೆಲವು ಶ್ರೀಮಂತರು ಈಗಲೂ ಬಲವಂತದಿಂದ ಜೀತ ಮಾಡಿಸಿಕೊಳ್ಳುತ್ತಿರುವರು. ಜೀತದ ಆಳನ್ನು ಹೆದುರಿಸಿ ಯಾರಾದರೂ ಬಂದು ಕೇಳಿದರೆ "ದಿನಗೂಲಿ ಮಾಡುತ್ತಿದ್ದೇನೆ" ಎಂದು ಹೇಳಿ ಎಂದು ಜೀತಮಾಡಿಸಿಕೊಳ್ಳುತ್ತಿರುವುದು ಕಾನೂನಿಗೆ ತೀರಾ ವಿರುದ್ಧವಾಗಿದೆ. ಕಾನೂನಿಗೆ ವಿರುದ್ಧವಾದರೂ ತಮ್ಮ ದಬ್ಬಾಳಿಕೆಯನ್ನು ಮುಂದುವರಿಸುತ್ತಲೇ ಇರುವರು. ಇದಕ್ಕೆ ತಕ್ಷಣ ಭೇಟಿಕೊಟ್ಟು ಸರಿಯಾಗಿ ವಿಚಾರಿಸಿ ಅವರನ್ನು ಜೀತದಿಂದ ಮುಕ್ತಗೊಳಿಸಬೇಕೆಂದು ಸಂಬಂಧಿಸಿದವರಲ್ಲಿ ವಿನಂತಿಸಿಕೊಳ್ಳುತ್ತೇನೆ.

—ಓರ್ವ ಓದುಗ

ಹರಿಜನ ಮಹಿಳೆಯ ಮೇಲೆ ಪೋಲಿಸ್ ಹಲ್ಲೆ

ತ್ರಿವೇಂಡ್ರಮ್‌ನ ಬೀದಿಯಲ್ಲಿ ಹರಿಜನ ಮಹಿಳೆಯೊಬ್ಬಳು ಹೋಗುತ್ತಿದ್ದಾಗ ಹಾಡು ಹಗಲಲ್ಲೆ ಪೋಲಿಸ್ ವ್ಯಾನೊಂದು ಬಂದು ಆಕೆಯನ್ನು ವ್ಯಾನಿನೊಳಗೆ ಎಳೆದು ಪೋಲಿಸ್ ಸ್ಟೇಷನ್ನಿಗೆ ಕರೆದೊಯ್ದು "ಪೋಲಿಸ್ ಕೃತ್ಯ" ನಡೆಸಿದರು. ಆಕೆ ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಮೂವತ್ತೆರಡು ವರ್ಷದ ಆಕೆಯ ಹೆಸರು ಸರೋಜಮ್ಮ. ಈಕೆಗೆ ಒಬ್ಬಳು ಒಂಬತ್ತು ವರ್ಷದ ಹೆಣ್ಣು ಮಗಳಿದ್ದು ಈಗ ಈಕೆ ತ್ರಿವೇಂಡ್ರಂನ ಸಬಾರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ ಕೆಲಸಮಾಡುತ್ತಿದ್ದಾಳೆ. ತ್ರಿವೇಂಡ್ರಂಗೆ ಬರುವ ಮುನ್ನ ಈಕೆ 1973ರಲ್ಲಿ ತಿರುಚಿಯಲ್ಲಿ ಕೆಲಸದಲ್ಲಿದ್ದಳು. ಅಲ್ಲಿ ಮೇಲಾಧಿಕಾರಿಯ ಜೊತೆಯಲ್ಲಿ ಸೌಹಾರ್ದವಾಗಿ ಇದ್ದುದರ ಬಗ್ಗೆ ಆತನ ಹೆಂಡತಿ, ಸರೋಜಿನಿಯ ಬಗ್ಗೆ ಸಂಶಯಾತ್ಮಕವಾಗಿ ದ್ವೇಷ ಕಾರುತ್ತಿದ್ದಳು. ಈ ಕಾರಣಕ್ಕಾಗಿ ಅವಳು ತನ್ನ ಗಂಡನಮೇಲೆ ಕಳುವಿನ ಆರೋಪ ಹೊರಿಸಿ ಈ ಕಳುವಿಗೆ ಸರೋಜಿನಿಯೂ ಕಾರಣವೆಂದು ದೂರಿತ್ತಿದ್ದಕ್ಕಾಗಿ ಪೋಲಿಸರು ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ. ಈ ಬಗ್ಗೆ ಸರೋಜಿನಿಯ ಸಹೋದ್ಯೋಗಿಗಳು ಪ್ರತಿಭಟನೆ ಸಲ್ಲಿಸುತ್ತಿದ್ದಾರೆ. (ಬ್ಲಿಟ್ಜ್ ಕೃಪೆ)

ಮೇಲ್ಜಾತಿ ಪ್ರತಿಷ್ಠಿತರ ದಾಂದಲೆಗೆ ಕೊನೆ ಎಂದು?

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹತ್ತಿರದ ರಾಂಪುರದಲ್ಲಿ ಕೆಲವು ಮೇಲ್ಜಾತಿ ಪ್ರತಿಷ್ಠಿತರು ದಿನಾಂಕ 1-4-76 ರಂದು ಅಲ್ಲಿನ ಹರಿಜನಮುಖಂಡರಾದ ಶ್ರೀ ಅಂಕಯ್ಯ ಶ್ರೀ ನಂಜುಂಡಯ್ಯ ಅವರನ್ನು ಪ್ರಾಣಾಂತಕವಾಗಿ ಥಳಿಸಿರುವುದು ವರದಿಯಾಗಿದೆ. ಶ್ರೀಅಂಕಯ್ಯ ಮತ್ತು ಶ್ರೀ ನಂಜುಂಡಯ್ಯನವರು ಕೆ.ಆರ್.ಆಸ್ಪತ್ರೆಯಲ್ಲಿ ಸುಶ್ರೂಷೆಗೆ ದಾಖಲಾಗಿದ್ದಾಗ ಅವರನ್ನು ಪಂಚಮ ಪ್ರತಿನಿಧಿ ಭೇಟಿಮಾಡಿದ್ದರು. ಇವರು 3-4-76 ರಂದು ಆಸ್ಪತ್ರೆಗೆ ದಾಖಲಾಗಿದ್ದು ಪಂಚಮ ಪ್ರತಿನಿಧಿ ೧೫ನೇ ತಾರೀಖು ಆಸ್ಪತ್ರೆಗೆ ಭೇಟಿನೀಡಿದಾಗಲೂ ಅವರ ಸ್ಥಿತಿ ಸುಧಾರಿಸಿರಲಿಲ್ಲ. ಇದರಿಂದಲೇ ಘಟನೆಯ ಭೀಕರತೆಯನ್ನು ಅರ್ಥಮಾಡಿಕೊಳ್ಳಬಹುದಿತ್ತು. ಇವರಲ್ಲದೆ ಅಂಕಯ್ಯನವರ ಹೆಂಡತಿ, ಮಗಳಿಗೂ ಮೇಲ್ಜಾತಿ ಪ್ರತಿಷ್ಠಿತರಿಂದ ಏಟು ಬಿದ್ದಿದ್ದು ಅವರೂ ಹತ್ತಿರದ ಆಸ್ಪತ್ರೆಯಿಂದ ಔಷಧಿ ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿರುವರು. ಈ ಘಟನೆ ಸಂದರ್ಭದಲ್ಲಿ ಎಂ.ಎಲ್.ಸಿ ಶ್ರೀ ವೆಂಕಟರಮಣ, ಅಸಿಸ್ಟೆಂಟ್ ಕಮಿಷನರ್ ಶ್ರೀ ವಾಸುದೇವಯ್ಯ, ಹಾಗೂ ಸರ್ಕಲ್ ಇನ್ಸ್‌ಪೆಕ್ಟರವರು ಸ್ಥಳಕ್ಕೆ ಭೇಟಿನೀಡಿರುವುದರಿಂದ ತಪ್ಪಿತಸ್ಥರಿಗೆ ತಕ್ಕಶಿಕ್ಷೆ ಆಗಬಹುದೆಂದು ಆಶಿಸಬಹುದಾಗಿದೆ.

ಈ ಘಟನೆಗೆ ಮೇಲ್ಜಾತಿಯವರ ಹರಿಜನ ದ್ವೇಷವೇ ಕಾರಣವೆಂದು ತಿಳಿದುಬಂದಿದೆ. ಜೀತಪದ್ಧತಿಯ ವಿರುದ್ಧವಾಗಿ ಶ್ರೀಅಂಕಯ್ಯ ಕೆಲಸ ಮಾಡುತ್ತಿದ್ದುದು ಮೇಲ್‌ಜಾತಿಯವರ ಕೋಪಕ್ಕೆ ಕಾರಣವಾಗಿದ್ದು ಅಲ್ಲಿನ ಮೇಲ್ಜಾತಿ ಪ್ರತಿಷ್ಠಿತರಾದ ವೈಸ್‌ಛೇರ್ಮನ್ ಡಿ.ಮಹದೇವಪ್ಪ, ಪಟೇಲ್ ಮಹದೇವಪ್ಪ, ಹೊಟೆಲ್ ಪುಟ್ಟಣ್ಣ, ಅವನ ತಮ್ಮ ಕೆವಡಬಸವಣ್ಣ, ಮಲಯಪ್ಪ, ಕಾಳಪ್ಪ, ಮಾದಣ್ಣ ಸೆಕ್ರೆಟರಿಮಾಂತಪ್ಪ (ಎಂ.ಡಿ.ಸಿ.ಸಿ), ಸೊಸೈಟಿಪ್ರೆಸಿಡೆಂಟ್ ಕೆಂಪಣ್ಣ ಮುಂತಾದ ದುಷ್ಕರು ಕೊಡಲಿ, ಮಚ್ಚು, ಕಲ್ಲು, ಆಯುಧಗಳೊಡನೆ ಯುಗಾದಿಹಬ್ಬದಂದು ಪೂಜೆ ಸಮಯದಲ್ಲಿ ಶ್ರೀ ಅಂಕಯ್ಯನವರನ್ನು ಬೀಳಿಸಿ ಮೂರ್ಛೆಯಾಗುವಂತೆ ಥಳಿಸಿದರೆಂದು ನೊಂದವರು ತಿಳಿಸಿದರು. ಗಲಾಟೆಯಾಗುವಾಗ ಅಂಕಯ್ಯನಕಡೆಯವರು ಹತ್ತಿರಬಾರದಂತೆ ಮಾಡಲು ಕಲ್ಲುತೂರಿ, ಬಿಡಿಸಲು ಬಂದ ಯಜಮಾನ್ ನಂಜುಂಡಯ್ಯನವರಿಗೂ ಥಳಿಸಿ ಆ ಮೇಲ್ಜಾತಿ ಗುಂಪು ದಾಂದಲೆ ಎಬ್ಬಿಸಿತೆಂದು ತಿಳಿದು ಬಂದಿದೆ. ಮೇಲ್ಜಾತಿಯವರ ಹರಿಜನದ್ವೇಷ ಇನ್ನೂ ಇರುವುದರಿಂದ, ಈಗಲೇ ತಕ್ಕ ಬಂದೋಬಸ್ತು ಮಾಡಬೇಕೆಂದು 'ಪಂಚಮ' ಒತ್ತಾಯಿಸುತ್ತದೆ.

ದೇವಸ್ಥಾನ ಪ್ರವೇಶಿಸಿದ ಹರಿಜನ ಯುವಕರಿಬ್ಬರ ಮೇಲೆ ದೌರ್ಜನ್ಯ

ಮಳವಳ್ಳಿ ತಾಲ್ಲೋಕು ರಾವಣಿ ಗ್ರಾಮದಲ್ಲಿ 'ಕೆಂಡದಯ್ಯನ ಜಾತ್ರೆ'ಯು ತಾ॥೨೬ ೩.೭೬ ರಂದು ನಡೆಯುತ್ತಿದ್ದು, ಆಗ ಮಳವಳ್ಳಿಟೌನ್‌ನ ನರಸಿಂಹಯ್ಯ ಮತ್ತು ಗುರುಪಾದ ಎಂಬ ಹರಿಜನ ಯುವಕರಿಬ್ಬರು ಪೂಜೆಗಾಗಿ ದೇವಸ್ಥಾನ ಪ್ರವೇಶಿಸಿದ್ದಕ್ಕಾಗಿ ಅಲ್ಲಿನ ಸವರ್ಣೀಯರು ಅವರಿಬ್ಬರನ್ನು ಚೆನ್ನಾಗಿ ಥಳಿಸಿದ್ದಾರೆ.

ಇದು ಇಪ್ಪತ್ತನೆಯ ಶತಮಾನ!

ನವ ಅಸ್ಪೃಶ್ಯತೆಯ ಒಂದು ಇಣುಕು ನೋಟ

ಶತ ಶತಮಾನಗಳಿಂದಲೂ ಹರಿಜನರ ಬೆವರು ರಕ್ತದಲ್ಲೆ ಆರಾಮವಾಗಿ ಬೊಜ್ಜು ಬೆಳೆಸಿಕೊಂಡು ಬಂದ ಸವರ್ಣೀಯರ ದೇಹ ಮನಸ್ಸು, ಕಾಲದ ಬದಲಾವಣೆಯಿಂದಾಗಿ ಹೊಸ ಹೊಸ ಅವಸ್ಥೆಯನ್ನು ಪಡೆಯುತ್ತಿದೆ. ಹರಿಜನರ ಪ್ರಗತಿಯನ್ನು ಸಹಿಸಲಾರದೆ ಆದರೆ ಅನಿವಾರ್ಯವಾಗಿ ಸಹಿಸಲೇ ಬೇಕಾಗಿರುವುದರಿಂದ ಒಂದು ವಿಚಿತ್ರ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾಗರಿಕರೆನಿಸಿಕೊಂಡ ಸವರ್ಣೀಯರು ಸಿಕ್ಕಿಹಾಕಿಕೊಂಡಿರುವರು. ಹಿಂದೆ ಸ್ಥೂಲವಾಗಿ ಇದ್ದ ಅಸ್ಪೃಶ್ಯತೆ ಇಂದು ನಾಗರಿಕರೆನಿಸಿಕೊಂಡ ಸವರ್ಣೀಯರ ನಡುವೆ ಸೂಕ್ಷ್ಮವಾಗುತ್ತಿದೆ. ಈ ಸೂಕ್ಷ್ಮವಾದ ಅಸ್ಪೃಶ್ಯತೆಯನ್ನು ಎದುರಿಸಬೇಕಾದವರು ವಿಚಾರವಂತರಾದ ಹರಿಜನರಾದ್ದರಿಂದ ಈ ಸೂಕ್ಷ್ಮತೆಯೇ ಹಿಂದಿನ ಸ್ಥೂಲತೆಗಿಂತ ಹೆಚ್ಚಿನ ಪೆಟ್ಟನ್ನು ಕೊಡುತ್ತಿದೆ. ಆದರೆ ಹೇಗೆ ಹಿಂದೆ ಇದ್ದ ಜಾತಿ ವ್ಯವಸ್ಥೆ ನಾಗರಿಕರ ನಡುವೆ ಸಾಂಪ್ರದಾಯಿಕ ಕವಚವನ್ನು ಕಳೆದುಕೊಂಡು ಬಹಳ ನಾಜೋಕಾಗಿ ಕಾಡಿಸುತ್ತಿದೆ ಎಂಬುದನ್ನು ಕೆಲವು ಘಟನೆ ಅನುಭವಗಳ ಮೂಲಕ ಸಾದರಪಡಿಸುವೆ.

ಹಿಂದೊಮ್ಮೆ ಮಹಾರಾಜಾ ಕಾಲೇಜಿನ ಒಬ್ಬರು ಹರಿಜನ ಅಧ್ಯಾಪಕರು ಹಾಜರಿ ಕೂಗಿದಾಗ ಅವರಿಗೆ ಸಿಗುತ್ತಿದ್ದ ಉತ್ತರ– ಪ್ರಸೆಂಟ್ ಎಂದು; ಪ್ರಸೆಂಟ್ ಸಾರ್ ಎಂದಲ್ಲ! ವಿದ್ಯಾರ್ಥಿಗಳು ಸಹಜವಾಗಿ ಅಧ್ಯಾಪಕರಿಗೆ ಹಲ್ಲು ಕಿರಿಯುವುದು, ನಮಸ್ಕಾರ ಹೊಡೆಯುವುದು, ಸ್ನೇಹದಿಂದ ವರ್ತಿಸುವುದು, ಸಾರ್, ಮೇಡಂ ಎಂದು ಉಚ್ಚರಿಸುವುದು ಹರಿಜನರಾಗಿಲ್ಲದಿದ್ದರೆ ಮಾತ್ರ. ಅಕಸ್ಮಾತ್ ಹರಿಜನರೊಡನೆ ಅವರು ವಿನೀತರಾಗಿ ನಡೆದುಕೊಂಡರೆ ಅದು ಬಹುಪಾಲು ಅಸಹಜ ಮತ್ತು ಸ್ವಾರ್ಥತೆಯಿಂದ ಕೂಡಿರುತ್ತದೆ. ಮೇಲೆ ತಿಳಿಸಿದ ಅಧ್ಯಾಪಕರು ಬಹಳ ಚೆನ್ನಾಗಿ ಪಾಠ ಪ್ರವಚನ ಮಾಡುತ್ತಿದ್ದರು ಎಂದು ಕೇಳಿದ್ದೇನೆ. ಬಹುಪಾಲು ಹರಿಜನ ಅಧ್ಯಾಪಕರ ಅಭಿಪ್ರಾಯದಂತೆ ಹರಿಜನ ಅಧ್ಯಾಪಕರ ಪಾಠ ಪ್ರವಚನಗಳನ್ನು ಆಲಿಸುವುದನ್ನು ಸ್ಪೃಶ್ಯ ವಿದ್ಯಾರ್ಥಿಗಳು ತಮ್ಮ ಘನತೆಗೆ ಕಮ್ಮಿ ಎಂದು ಭಾವಿಸುವರು. ಅದಕ್ಕೆ ಅವರು ಗುಂಪು ಕಟ್ಟಿ ಪಾಠವನ್ನು ಮುಂದುವರಿಸಲು ಅಡ್ಡಿ ಮಾಡುವುದೂ ಉಂಟು. ಆದಕ್ಕಾಗಿ ಸಾಮಾನ್ಯವಾಗಿ ಅವರು ತಮಗೇ ಅರ್ಥವಾಗಿರದ ಪ್ರಶ್ನೆಗಳನ್ನು ಕೇಳಿ ಮೇಷ್ಟ್ರು ತಬ್ಬಿಬ್ಬಾಗುವಂತೆ ಮಾಡಿ ಖುಷಿ ಪಡುವುದು ಸವರ್ಣೀಯ ವಿದ್ಯಾರ್ಥಿಗಳ ಒಂದು ಫ್ಯಾಬಿಯೆ (ಖಾಯಿಲೆ) ಎನ್ನಬಹುದು. ಒಂದು ಸಲ ಓರ್ವ ಅಸ್ಪೃಶ್ಯ ಉಪಾಧ್ಯಾಯರು ಗಂಟಲು ಹರಿಯುವಂತೆ ಪಾಠ ಮಾಡಿ ಇಂದಿನ ಪಾಠ ಅರ್ಥವಾಯ್ತೆ ? ಎಂದು ಪ್ರಶ್ನಿಸಿದಾಗ ಆ ವಿದ್ಯಾರ್ಥಿಗಳು ಮೇಷ್ಟ್ರನ್ನೇ ದುರುಗುಟ್ಟಿಕೊಂಡು ನೋಡಿದರಂತೆ. ಹರಿಜನ ಉಪಾಧ್ಯಾಯರು ಪ್ರಶ್ನೆ ಕೇಳಿದರೆ ಸವರ್ಣೀಯ ವಿದ್ಯಾರ್ಥಿಗಳು ಉತ್ತರಿಸುವುದು ಅವರ ಆತ್ಮ ಗೌರವಕ್ಕೆ ಕುಂದಲ್ಲವೆ? ಹರಿಜನ ಉಪಾಧ್ಯಾಯರು ಎಷ್ಟೇ ಉತ್ತಮವಾಗಿ ಪಾಠ ಮಾಡಿದರೂ ಆತ ಕೆಲವು ಇತಿ ಮಿತಿಗಳಲ್ಲೇ ಸಂಚರಿಸಬೇಕು. ತರಗತಿಗಳಿಗೆ ಚಕ್ಕರು ಕೊಟ್ಟ ವಿದ್ಯಾರ್ಥಿಗಳು ಹರಿಜನ ಅಧ್ಯಾಪಕರಿಂದ ಹಾಜರಿಯನ್ನು ತಮ್ಮ ಜನ್ಮ ಸಿದ್ಧ ಹಕ್ಕು ಎಂಬಂತೆ ಡಿಮಾಂಡ್ ಮಾಡುತ್ತಾರೆ. ಇದೇ ವರ್ತನೆ ಬೇರೆ ಅಧ್ಯಾಪಕರೊಡನೆ ಇರುವುದಿಲ್ಲ. ಹಾಗೆಯೇ ಹೊಸದಾ

ಬಂದ ಅಧ್ಯಾಪಕರು ಎಷ್ಟೇ ಬುದ್ಧಿವಂತರಾದರ

ಪ್ರಾರಂಭದಲ್ಲಿ ತಡವರಿಸುತ್ತಾರೆ. ಹೀಗೆ ತಡವರಿಸುವುದ

ಹರಿಜನೇತರ ಅಧ್ಯಾಪಕರಿಗೆ ಜಾತಿಯ ಕಾರಣದಿಂದಾ

ದೋಷವಾಗುವುದಿಲ್ಲ. ಅದೇ ಹರಿಜನದವನಾದ

ರಿಪ್ರೋರ್ಟ್ ಮಾಡಿಕೊಂಡ ಕೂಡಲೇ ಏಕ್‌ದಂ ಚೆನ್ನಾ

ಪಾಠ ಮಾಡುವುದನ್ನು ಕಲಿತಿರಬೇಕು. ಇಲ್ಲದಿದ್ದ

ಅವನು ವಿದ್ಯಾರ್ಥಿಗಳ ಕೈಬಾಯಲ್ಲಿ ಸಿಕ್ಕಿ ನರಳುವುದ

ಕಟ್ಟಿಟ್ಟದ್ದು. ಚೆನ್ನಾಗಿ ಪಾಠ ಮಾಡುವ ಹರಿಜನ ಅಧ್ಯಾ

● ಕೃ. ಸುಮಿತ್ರಾಬಾಯಿ

ಪಕರ ಮುಂದೆ ಪಾಠ ಚೆನ್ನಾಗಿ ಮಾಡದ ಆದರೂ ದ

ನಾದ ಹರಿಜನೇತರ ಅಧ್ಯಾಪಕ ಹೀಗೆ ಹೇಳಿದ, "ಅ

ನೀವು ಆ ರೌಡಿ ಬ್ಯಾಚ್ ಅಂತೀರಲ್ಲ, ಅವರೆಲ್ಲ ನ

ಕ್ಲಾಸಲ್ಲಿ ಎಷ್ಟು ನಮ್ರರಾಗಿರ್ತಾರಂತೀರಿ, ಪಿನ್ ಪ

ಅನ್ನೊಲ್ಲ..." ಮುಂತಾಗಿ ಈ ಹರಿಜನೇತರ ಮೆಜಾರಿ

ಕಮ್ಯುನಿಟಿಯ ಅಧ್ಯಾಪಕನಿಗೆ ಎ ಬಿ ಸಿ ಡಿ ತಿಳಿ

ದಿದ್ದರೂ ಅವನ ಪಾಠ ವಿದ್ಯಾರ್ಥಿಗಳಿಗೆ ಹಣ್ಣು ಜ

ತಿಂದ್ಹಂಗೆ ಇರುತ್ತದೆ. ಈ ಅಧ್ಯಾಪಕರಿಗೆ ಕೆಲವು ಬು

ವಂತ ಹುಡುಗರು ಪ್ರಶ್ನೆ ಕೇಳಿದರೆ ಅಧ್ಯಾಪಕ ದು

ಗುಟ್ಟಿಕೊಂಡು ನೋಡಿ ಎತ್ತರಿಸಿದ ಧ್ವನಿಯಲ್ಲಿ 'ವಾ

ಎಂದು ಕೇಳಿ ವಿದ್ಯಾರ್ಥಿಗಳು ಪ್ರಶ್ನೆಯನ್ನು ಪು

ಉಚ್ಚರಿಸದಂತೆ ತೆಪ್ಪಗಾಗಿಸುತ್ತಾನೆ. ಅವನ ಪಾಠ ತ

ಲಾರದೆ, ಬಾಯಿಬಿಡಲಾರದೆ ವಿದ್ಯಾರ್ಥಿ ಮಿಸುಕ

ದೈವೀ ಸಿದ್ಧಾಂತ, ಕ್ರಿಯಾಶೀಲತೆ ಮತ್ತು ಇಂಡಿಯಾದ

ಪುರಾತನವಾದ ನಮ್ಮ ದೇಶದಲ್ಲಿ ಬದಲಾವಣೆಗಳು ಅದೂ ತುಂಬ ತಡವಾಗಿ ಆಗುತ್ತವೆ. ಕಾಲಕ್ಕನುಗುಣವಾಗಿ ನಡೆಯುವುದು ನಮಗೆ ರಾಷ್ಟ್ರೀಯ ನಡತೆಯಾಗಿರುವಂತೆ ತೋರುವುದಿಲ್ಲ. ವಾಯುಗುಣದ ದೃಷ್ಟಿಯಿಂದ ನಾವು ಉಷ್ಣದೇಶದವರಾದರೂ ಬಹಳ ತಣ್ಣನೆಯ ಜನರಾಗಿದ್ದೇವೆ. ಪೂರ್ಣದಶಕದ ಎಲ್ಲ ಯೋಜನೆಗಳಿಂದಲೂ ಅಷ್ಟೇನು ನಿಜವಾದ ಅಭಿವೃದ್ಧಿ ಸಾಧಿಸಿಲ್ಲವೆಂದು ಗೊಣಗುವ ಸದ್ದನ್ನು ಆಗಾಗ ನಾವು ಕೇಳಿದ್ದೇವೆ. ಅವರ ಸ್ವಂತ ಅನುಕೂಲಕ್ಕಾಗಿರುವಂತಹ ಕೆಲಸಗಳಲ್ಲಿ ಸಹಕರಿಸಬೇಕೆಂಬ ನಿಜವಾದ ಆಸ್ಥೆಯನ್ನು ಜನ ತೋರಿಸಿಲ್ಲ. ಇದೆಲ್ಲ ಕೇಳಿದಾಗ ಸ್ವಲ್ಪ ಗದ್ಗದ ಕಂಠದಿಂದ, ನಮಗಿಂತಲೂ ಹಿಂದುಳಿದ ರಾಷ್ಟ್ರಗಳಿಂದು ನಮಗಿಂತ ದೂರ ಮುನ್ನಡೆದಿವೆ ಎಂದೇ ಹೇಳಬೇಕು. ಆದರೆ ಹಿಂದೆಯೇ ನಾವು ಜನಾಂಗವನ್ನು ಕಳೆದುಕೊಂಡಿದ್ದೇವೆ ಎನ್ನಿಸುತ್ತದೆ.

ಜನಾಂಗಿಕವಾಗಿ ಹಿಂದೆ ಬಿದ್ದಿದ್ದೇವೆ ಎಂಬ ಮಾತು ಹೋಗಲಿ, ಕೊರಕಲಿನಿಂದ ದೇಶವನ್ನು ಮುಂದೆ ಎಳೆಯುವಂಥ ರಾಷ್ಟ್ರೀಯ ಸ್ಫೂರ್ತಿಯಕೊರತೆ ನಮ್ಮಲ್ಲಿದೆ ಎಂದು ಹೇಳುವುದರಿಂದ ಯಾವ ಉಪಯೋಗವಿಲ್ಲ. ನಾವು ಸಮರ್ಥ ಸರ್ಕಾರವನ್ನು ಹೊಂದಿರಬಹುದು. ಸಬಲ ಹಾಗೂ ದಕ್ಷ ಅಧಿಕಾರಿಗಳನ್ನು ಹೊಂದಿರಬಹುದು ಮತ್ತು ಉತ್ಸಾಹಿ ಅಧಿಕಾರಿವರ್ಗ, ಸರ್ಕಾರಿ ನೌಕರರನ್ನು ಹೊಂದಿರಬಹುದು. ಆದರೆ ಈ ಸಾಮರ್ಥ್ಯ ಮತ್ತು ಉತ್ಸಾಹದೊಂದಿಗೆ ಜನತೆಯ ಸ್ವಯಂ ಪ್ರತಿಕ್ರಿಯೆ ಸಮ್ಮೇಳವಾಗದೆ, ನಮ್ಮ ಉದ್ದೇಶಗಳು ವ್ಯರ್ಥ ಕನಸುಗಳಾಗಿ ಉಳಿಯುತ್ತವೆ. ಇಂದು ದೇಶದಲ್ಲಿ ಇದೇ ಆಗುತ್ತಿದೆ. ಯಾವುದೂ ನಮ್ಮ ಜನರನ್ನು ಉತ್ಸಾಹಗೊಳಿಸಿಲ್ಲ; ಸ್ಫೂರ್ತಿಗೊಳಿಸಿಲ್ಲ. ಈ ದೇಶಕ್ಕೆ ಹೊಸ ಶಕ್ತಿಯನ್ನು ತಂದುಕೊಡುವ ಕೆಲಸ ಅವರನ್ನು ಪುಳಕಗೊಳಿಸಿಲ್ಲ.

ಜೀವನದ ಬಗ್ಗೆ ನಮಗಿರುವ ಮೂಲಭೂತ ದೃಷ್ಟಿಯೇ ಈ ಸೋಮಾರಿ ನಡುವಳಿಕೆಗೆ ಮೂಲಕಾರಣವಾಗಿದೆ. ತಾಲ್ಲೂಕು ಮತ್ತು ಸಿಟಿಗಳಲ್ಲಿ ಬದುಕುತ್ತಿರುವ ಕೆಲವು ಸಾವಿರ ಜನ ಅಥವಾ ಇನ್ನೂ ಕೆಲವು ಲಕ್ಷ ಜನ ಹೊಸ ರೀತಿಯ ಯೋಜನೆಯನ್ನು ಅಳವಡಿಸಿಕೊಂಡಿದ್ದರೂ ಅದು ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಅದೂ ಕೂಡ ಅನಾಗರಿಕ ಹಕ್ಕುಬಾಧ್ಯತೆಯಾಗಿದೆ. ವಿದ್ಯಾವಂತರನ್ನು ಕೂಡಿಕೊಂಡು ನಮ್ಮ ಬಹುಸಂಖ್ಯಾತ ಜನ ಗ್ರಹಚಾರ ಇಲ್ಲವೆ ಅದೃಷ್ಟದಲ್ಲಿ ಪೂರ್ಣ ಭರ

ಹೊಂದಿದವರಾಗಿದ್ದಾರೆ. ಅದೃಷ್ಟ ಎಲ್ಲವನ್ನೂ ಖ

ನಾತುಪಡಿಸುತ್ತದೆ. ಯಾವುದನ್ನು ಅದು ಗೊತ್ತುಪಡಿ

ದೆಯೋ ಅಥವಾ ಮಾಡಿ ಮುಗಿಸಿದೆಯೊ ಅದನ

ಪ್ರತಿಭಟಿಸಲು ಯಾರಿಗೂ ಅವಕಾಶಕೊಟ್ಟಿಲ್ಲ. ಕೇವ

ತಮ್ಮ ನೇತೃತ್ವ, ಕಷ್ಟದ ದುಡಿಮೆ ಹಾಗೂ ದೂ

ದೃಷ್ಟಿಯಿಂದ ಕೆಲವು ಜನ ತಾವು ಹೇಗೆ ಮುಂದುವರಿ

● ಬಿ ಕೃಷ್ಣಪ್ಪ

ದರೆಂಬ ಬಗ್ಗೆ ಎದ್ದು ಕಾಣುವಂತಹ ಉದಾಹರ

ಗಳನ್ನು ನಮ್ಮ ಮುಂದಿಟ್ಟಾಗ ನಾವು ಅದೆಲ್ಲವನ

ಗ್ರಹಚಾರ ಇಲ್ಲವೆ ಅದೃಷ್ಟಕ್ಕೆ ಆರೋಪಿಸುತ್ತೇ

ಈ ರೀತಿಯ ಉದಾಹರಣೆಗಳು ಉಳಿದವರನ್ನು ಅಂತ

ಪ್ರಯತ್ನಗಳಿಗೆ ಪ್ರಚೋದಿಸುವುದಿಲ್ಲ. ಗ್ರಹಚಾರ

ಮೂಲವನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಅ

ಅದು ಕೇವಲ ಮೂಲ ವಸ್ತುವಾಗುತ್ತದೆಯೇ ಹೊರ

ಎಲ್ಲ ವಸ್ತುವಾಗುವುದಿಲ್ಲ. ಭಾರತ ನಿರ್ಮಾಣವಾಗದಿ

ವುದಕ್ಕೆ ನಮ್ಮ ತೃಪ್ತಿ ತತ್ವವೇ ಜವಾಬ್ದಾರಿಯಾಗಿದ

ಟೆಟ್ ಫ್ರಂ ದಿ ಕ್ಲಾಸ್" ಎಂದು ಜೋರು
ಕೆಲವು ಉದ್ಯೋಗವನ್ನು ಹರಿಜನರಿಗೆ
ಟ್ಟಿದ್ದರೂ ಈ ಕೆಲವು ಸವಲತ್ತುಗಳು
ಗೇ ಮೀಸಲಾಗಿರುತ್ತವೆ. ಆಮೇಲೆ ಮಿಸು
ರ್ಥಿಗೆ ಮೇಷ್ಟ್ರ ಜಾತಿಯ ಹುಡುಗರಿಂದ
ಡೆತ ಬಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.
ಹೇಳದ ಒಂದು ರೀತಿಯ ಒಡಂಬಡಿಕೆ
ಲ್ಲಿ ಕಾಣಬಹುದು.
ಅಧ್ಯಾಪಕಿಯಾಗಿ ನನ್ನ ಅನುಭವವನ್ನೆ
ರೆ ಯಾವ ಮಹಾ ಪಾಪಮಾಡಿ ಈ
ಕ್ಕೆ ಬಂದೆ ಎಂದು ಒಂದೊಂದು ಸಲ
ಹರಿಜನ ಅಧ್ಯಾಪಕಿ ತನ್ನ ಹಿಂದಿನ ಓದಿ,
ಕಲಿತ ನಡೆನುಡಿಗಳನ್ನೇ ಮರೆತು ಹೊಸ
ನ್ನು ವಿದ್ಯಾರ್ಥಿಗಳಿಂದ ಕಲಿಯ ಬೇಕಾಗು
ಲಿಗೆ ಅವಳು ಭಂಡತನವನ್ನು ಅಭ್ಯಾಸ
ಅನಂತರ ಕಿವುಡಿಯೂ ಆಗಬೇಕು,
ಭಟನಾ ಶಕ್ತಿಯನ್ನು ಬೆಳೆಸಿಕೊಂಡರೆ
ಾಸೆ, ಕೊನೆಗೆ ಜೀವದಾಸೆಯನ್ನೂ ತೊರೆ-
ಆಗ ಮಾತ್ರ ಕಾಲೇಜುಗಳಲ್ಲಿ ಇತರರಂತೆ
ದು. ಆ ಅಧ್ಯಾಪಕಿಯ ತರಗತಿಯಲ್ಲಿ
ದ್ಯಾರ್ಥಿಗಳ ನಡವಳಿಕೆಯನ್ನು ಸ್ಥೂಲವಾಗಿ
ಹುದು: ಪೋಕರಿ ವಿದ್ಯಾರ್ಥಿಗಳು ತಮ್ಮ
ನೆಗಳು ಸಹಪಾಠಿಗಳಿಗೆ ತಿಳಿಯಬಾರದೆಂದು
ಚಿನಲ್ಲಿ ಕೂರುತ್ತಾರೆ. ಆ ಮೇಡಂ ಸೀರಿ-
ಾಠಮಾಡುತ್ತಿರುವಾಗ ಕಣ್ಣು ಮಿಟುಕಿಸಿ,

ಅಸಭ್ಯವಾಗಿ ಕೈಕಾಲುಗಳನ್ನಾಡಿಸಿ ಪಾಠ ಕೆಡಿಸಲು ಯತ್ನಿಸುತ್ತಾರೆ. ಇದೆಲ್ಲವನ್ನು ಗಮನಿಸಿಯೂ ಗಮನಿಸದಂತೆ ಪಾಠ ಮಾಡುತಿದ್ದರೆ ಅವರ ಕ್ರೋಧ ಹೆಚ್ಚುತ್ತದೆ. ಮತ್ತು ತಮ್ಮ ಚೀಣಾ ಮೀಸೆಗಳನ್ನು ಎರಡು ಕೈಯಲ್ಲೂ ತಿರುಚುತ್ತಾ ಗುರುಗುಟ್ಟುತ್ತಿರುತ್ತಾರೆ. ಇಷ್ಟೆಲ್ಲ ಕಿರುಕುಳವನ್ನು ಅಲಕ್ಷಿಸಿ ನೋಟ್ಸ್ ಬರೆಸಲು ಶುರುಮಾಡಿದರೆ, ಅವರ ಆಟ ಸಾಗದೆಂದು ಮನವರಿಕೆಯಾಗಿ ದಿಗ್ಗನೆದ್ದು ಹೊರ ಹೋಗುತ್ತಿದ್ದೇನೆಂದು ಸೂಚಿಸಿ ತಮ್ಮ ಎದೆಗಾರಿಕೆಯನ್ನು ಪ್ರದರ್ಶಿಸುತ್ತಾರೆ. ಇನ್ನು ಕೆಲವರು ಈ ಮೇಡಮ್ಮಳ ಹಮ್ಮನ್ನು ಹೆಂಗಾರು ಮುರಿಯಬೇಕೆಂದು ನಿಶ್ಚಯಿಸಿ ಪಾಠ ನಡೆಯುವಾಗ ಹೇಳದ ಕೇಳದೆ ಎದ್ದು ಹೊರಗೆ ಹೋಗುತ್ತ ಏನನ್ನೊ ಸಾಧಿಸಿದವರಂತೆ ಸಹಪಾಠಿಗಳ ಕಡೆಗೆ ಶೌರ್ಯದ ದೃಷ್ಟಿ ಬೀರಿ ಬೀಗುತ್ತ ಹೋಗುತ್ತಾರೆ ಅವರ ಪಾರ್ಟಿಯ ಹುಡುಗರು ವಿಲನ್‌ಗಳಂತೆ ನಗುವರು. ಇಷ್ಟು ಅವರ ಸಾಮಾನ್ಯ ಲಕ್ಷಣಗಳು. ಇದು ಹರಿಜನ ಅಧ್ಯಾಪಕರೊಡನೆ ಹರಿಜನೇತರ ವಿದ್ಯಾರ್ಥಿಗಳ ಜಾತೀಯ ನಡವಳಿಕೆಯನ್ನು ಸ್ಪಷ್ಟಪಡಿಸುತ್ತದೆ.

ಇನ್ನು ವಿದ್ಯಾರ್ಥಿ ನಿಲಯಗಳಿಗೆ ಬಂದರೆ ಅಲ್ಲಿ ಹರಿಜನ ವಿದ್ಯಾರ್ಥಿಯರನ್ನು ಇತರರು ರೂಂಮೇಟ್ ಆಗಿ ಪಡೆಯಲು ಇಚ್ಛಿಸುವುದಿಲ್ಲ. ಅಕಸ್ಮಾತ್ ಇದ್ದರೂ ಅವರು ತಮ್ಮ ಜಾತಿಯನ್ನು ಸುಳ್ಳು ಹೇಳಿಕೊಂಡಿರುತ್ತಾರೆ. ನಿಜ ತಿಳಿದಕೂಡಲೆ ವಾರ್ಡನ್‌ಗೆ ಹೇಳಿ ರೂಮು ಬದಲಾಯಿಸಿದ ಸಂಗತಿಗಳಿಗೆ ಕೊರತೆಯಿಲ್ಲ. ಒಂದು ಹಾಸ್ಟಲ್‌ನಲ್ಲಿ ಹರಿಜನ ವಿದ್ಯಾರ್ಥಿನಿಯೋರ್ವಳಿಗೆ

ವಿಶೇಷ ಲೇಖನ

ನೀರಡಿಕೆಯಾದಾಗ ಆ ಹುಡುಗಿ ಹೌಸ್‌ಕೀಪರ್ ಕೊಠಡಿಯಲ್ಲಿದ್ದ ಹೂಜಿ ನೀರನ್ನು ಕುಡಿದಾಗ, ಸಂಗತಿ ತಿಳಿದ ಆ ಹೌಸ್‌ಕೀಪರ್ ಕಸಿವಿಸಿಗೊಂಡು ಮೈಲಿಗೆಯಾದಂತೆ ವರ್ತಿಸಿ ಸೌಮ್ಯ ಧ್ವನಿಯಲ್ಲಿ ನನ್ನನ್ನೆ ಕೇಳಿದ್ದರೆ ಕಳುಹಿಸಿಕೊಡುತ್ತಿದ್ದೆ ಎಂದಳಂತೆ! ಇದು ಎಂಥಾ ಮೂಗೇಟು ನೋಡಿ. ಮತ್ತೊಮ್ಮೆ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯೋರ್ವಳು ಸ್ಕಾಲರ್‌ಶಿಪ್ ಪಡೆಯುವುದಕ್ಕಾಗಿ, ಪ್ರಿನ್ಸಿಪಾಲರ ಸಹಿಯನ್ನು ಪಡೆಯಲು ಹೋದಾಗ ಅವರು ಬಂದ ಸಮಾಚಾರವನ್ನು ವಿಚಾರಿಸಿ ಚಕಿತರಾಗಿ 'ಏನ್ರಿ ಷೆಡ್ಯೂಲ್ಡ್ ಕ್ಯಾಸ್ಟ್ ಅಂತೀರಿ ಇಷ್ಟ್ ಮಾಡರ್ನ್ ಆಗಿ ಡ್ರೆಸ್ ಮಾಡಿಕೊಂಡಿದ್ದೀರಿ?' ಎಂದು ಪ್ರಶ್ನಿಸಿ ಕಕ್ಕೆಕಾಯಿ ಮೂಸಿದವರಂತೆ ಮುಖಮಾಡಿಕೊಂಡು, ಸ್ಥಾನದ ದೃಷ್ಟಿಯಿಂದ ಸಹಿಹಾಕಿದರಂತೆ. ಇವರ ಇಂಗಿತ ಹರಿಜನ ವಿದ್ಯಾರ್ಥಿಗಳು ನೋಡಿದ ಕೂಡ್ಲೆ ಗುರುತಿಸುವಂತೆ ಅವರ ಉಡುಪುಗಳು ಇರಬೇಕು. ಬದಲಾವಣೆಯನ್ನು ಸಹಿಸದೆ ಹರಿಜನರು ದಾಸರಾಗಿರುವುದನ್ನೆ ಒಳಗೊಳಗೇ ಅಪೇಕ್ಷಿಸುತ್ತಾರೇನೊ ಎಂಬ ಅನುಮಾನ ಬರುತ್ತದೆ. ಹಿಂದೆ ಪ್ರತಿಯೊಬ್ಬನಿಗೂ ಜಾತಿಯಂತರಕ್ಕನುಸಾರ ಫಿಕ್ಸೆಡ್ ಉಡುಪುಗಳಿದ್ದಂತೆ ಈಗಲೂ ಇಂಥಜನರು ಬಯಸಬಹುದು.

ಎಲ್ಲರಿಗೂ ತಿಳಿಯಬಹುದಾದ ಒಂದು ವಿದ್ಯಾರ್ಥಿಸಂಘದ ಕಥೆ ಹೇಳುವೆ: ಕಾಲೇಜಿನ ಚುನಾವಣೆಗೆ ಹರಿಜನನೋರ್ವ ಸ್ಪರ್ಧಿಸಿದ. ಬೇರೆ ಜಾತಿಯ ವಿದ್ಯಾರ್ಥಿಗಳು ಅವನನ್ನು ಹಿತ್‌ಡ್ರಾ ಮಾಡಿಕೊಳ್ಳುವಂತೆ ಬಲವಂತ

(ಮುಂದಿನ ಪುಟಕ್ಕೆ)

...ನಡೆ

ಋಷಿಗಳು ದೈವೀ ಸಿದ್ಧಾಂತದ ಸೃಷ್ಟಿಕರ್ತ
ಹುದು. ಬಹಳಮಾಡಿ ಅವರು ಅದನ್ನು
ಸ ಕಿಂಚಿತ್ ಪ್ರಮಾಣದಲ್ಲಿ ಜನರ ನಡಾ-
ನಿಯಂತ್ರಿಸುವ ಕರ್ಮಸಿದ್ಧಾಂತದೊಂದಿಗೆ
ರಬಹುದು. ಏನೇ ಆದರೂ ಮಧ್ಯಕಾಲೀನ
ನಮ್ಮ ದುರಾದೃಷ್ಟಕ್ಕೆ ಈ ದೇಶವು
ಹಾಗೂ ನಿಸ್ಸಹಾಯಕತೆಗಳಲ್ಲಿ ಮುದುರಿ
ರನ್ನು ಕಂಡ ಅಸಂಖ್ಯಾತ ಋಷಿಗಳು,
ದ ತುಂಬಿಹೋಗಿತ್ತು. ಈ ಸನ್ಯಾಸಿಗಳು
ಜನವೇ ಅಲ್ಲ. ಸ್ವತಃ ಕೆಲಸಮಾಡುವ
ವರೂ ಆಗಿರಲಿಲ್ಲ. ಅವನ ಪರಿಸ್ಥಿತಿಯ
ನವನ ನಿಸ್ಸಹಾಯಕತೆಯನ್ನು ಕುರಿತು
ಹಾಡಿದರು. ಮುಂದೆ ಬರಬಹುದಾದ ಎಲ್ಲ
ನವನನ್ನು ಮಾನಸಿಕವಾಗಿ ದುರ್ಬಲಗೊಳಿ

ಕ ಹಾಗು ಸಾಮಾಜಿಕ ಶ್ರೇಷ್ಠತೆಗಳಿಂದ
ವು ರಾಜಕೀಯವಾಗಿ ಮತ್ತು ಆರ್ಥಿಕ
ಅವನತಿಗೆ ಕಾರಣವಾಗಿದೆ. ದೈವೀಗೀತೆ
ತಮ್ಮ ಕಾಲಿಗೆ ವಿಧ ವಿಸು ನಿಗಧಿ ಪಡಿಸಿ

ದೆಯೊ ಅದನ್ನು ಒಪ್ಪಿಕೊಳ್ಳುವಂತೆ ಜನರಿಗೆ ಬೋಧಿಸಿದರು. ಅದನ್ನು ಪ್ರತಿಭಟಿಸುವುದು ಅಥವಾ ಬದಲಾಯಿಸಲು ಪ್ರಯತ್ನಿಸುವುದು ದೇವರಿಗೇ ಪ್ರತಿಸ್ಪರ್ಧಿಸಿದಂತೆ ಎಂದು ಭಾವಿಸಲಾಗಿತ್ತು. ಬೇರೆರೀತಿಯಿಂದಲೂ ಸಂಪೂರ್ಣ ಮೂಢ ನಂಬಿಕೆಗಳಿಂದ ತುಂಬಿದ ಜೀವನವು ಕತ್ತಲೆಯ ಕೂಪದಲ್ಲಿ ನರಳುತ್ತಿರುವ ಜನರಿಗೆ ಬಹುಶಃ ಬೆಳಕನ್ನು ಚೆಲ್ಲುವ ಈ ಗಣ್ಯ ಪುರುಷರ ಭೋಧನೆಗಳಿಂದ ದ್ವಿಗುಣವಾಗಿ ನಿಸ್ಸತ್ವಗೊಳಿಸಲ್ಪಟ್ಟಿತು. ಪೂರ್ಣ ತೃಪ್ತಿಯು ಅತ್ಯಂತ ಮೂಲಭೂತವಾದವುಗಳನ್ನು ಬಿಟ್ಟು ಉಳಿದ ಎಲ್ಲ ಆರ್ಥಿಕ ಕಾರ್ಯಕ್ರಮಗಳನ್ನು ವಿರಾಮಸ್ಥಿತಿಗೆ ತಂದು ಬಿಟ್ಟಿತು. ಸುಧಾರಣಾವಾದಿಗಳು ಹಾಕಿದ ತಡೆಗಳು ಸಾಮಾಜಿಕ ಚಕ್ರವನ್ನು ಎಷ್ಟರಮಟ್ಟಿಗೆ ಬಿಗಿಗೊಳಿಸಿವೆ ಎಂದರೆ ಇಂದು ಅದನ್ನು ಸಡಿಲಗೊಳಿಸುವ ಎಲ್ಲ ಪ್ರಯತ್ನಗಳು ಕಷ್ಟದಾಯಕವಾಗಿವೆ.

ಜೀವನದ ಸಮಸ್ಯೆಗಳ ಬಗ್ಗೆ ಸಾಕಷ್ಟು ದೂರದೃಷ್ಟಿ ಇಲ್ಲದ ಈ ಋಷಿಗಳು ತೃಪ್ತಿಯ ದಯೆಯನ್ನು ಕುರಿತು ಹಾಡಿದರು. ಅರಿವಿಲ್ಲದೆಯೆ ಪಾಳೆಗಾರಿ ಸಮಾಜವ್ಯವಸ್ಥೆ ಬಿಗಿಗೊಳ್ಳಲು ಸಹಾಯ ಮಾಡಿದರು. ಹೀಗೆ ಈ ಬೋಧ

ಒಂದು ಚಿಂತನೆ

ಕರು ಜನಪ್ರಿಯರಾಗಿ ಸಮಾಜದ ಎಲ್ಲ ವರ್ಗ ಹಾಗೂ ಗುಂಪಿನ ಜನರ ಒಪ್ಪಿಗೆಗೆ ಪಾತ್ರರಾಗಿದ್ದರು. ಬಡವರು ಮುಂದಿನ ಲೋಕದಲ್ಲಿ ಪ್ರತಿಫಲ ಗಳಿಸಬಹುದೆಂಬ ಭರವಸೆಯಿಂದ ಅವರ ತೃಪ್ತಿ ಸಿದ್ಧಾಂತವನ್ನು ಒಪ್ಪಿಕೊಂಡರು. ಶ್ರೀಮಂತರು ಮಾಡಿದ್ದಕ್ಕೆಲ್ಲ, ಹೊಂದಿದ್ದಕ್ಕೆಲ್ಲ ಅದೃಷ್ಟ ತತ್ವ ನ್ಯಾಯವೆಂದು ರುಜುವಾತುಪಡಿಸಿತು.

ಇನ್ನು ಮುಂದಯೂ ಈ ದಿವ್ಯಾತ್ಮಗಳು ನಮ್ಮ ಎಲ್ಲ ಯೋಚನಾ ಪಥವನ್ನು ಬಣ್ಣಗೊಳಿಸಿ, ನಮ್ಮ ಎಲ್ಲ ಕ್ರಿಯೆಗಳನ್ನು ನಿರ್ಣಯಿಸಿ ಪ್ರಭಾವಗೊಳಿಸಬಲ್ಲವೇನು? ದುರದೃಷ್ಟವಶಾತ್ ಅವರ ಪ್ರಭಾವ ಇನ್ನೂ ಸತ್ತಿಲ್ಲ. ಎಲ್ಲ ಅವಿದ್ಯಾವಂತ ಸಮೂಹ, ಬಹುಭಾಗ ವಿದ್ಯಾವಂತರೂ ಸಹ ಈ ಋಷಿಗಳ ಉಪದೇಶಗಳಿಂದ ಜೀವನದ ಎಲ್ಲ ಸಮಾಧಾನ ಪಡೆಯುತ್ತಾರೆ. ಭಾರತೀಯ ನಾರಿಯರಂತೂ ಅವರ ಧರ್ಮನಿಷ್ಠ ಅನುಯಾಯಿಗಳಾಗಿದ್ದಾರೆ. ಈ ಬಡ ಸ್ತ್ರೀ ಪುರುಷರನ್ನು ಮಾತ್ರ ಏಕೆ ಬಯ್ಯುವುದು? ಸರ್ಕಾರವೂ ಸಹ ಅವರ ಪ್ರಭಾವದಿಂದ ಮುಕ್ತವಾಗಿಲ್ಲ ವಿವಿಧ ಕೇಂದ್ರಗಳಿಂದ ಪ್ರಸಾರವಾಗುವ ಆಲ್ ಇಂಡಿಯಾ ರೇಡಿಯೊ ಕಾರ್ಯಕ್ರಮಗಳನ್ನು ಸ್ವಲ್ಪ ಕೇಳಿ.

(ಮುಂದಿನ ಪುಟಕೆ)

ನವ ಅಸ್ಪೃಶ್ಯತೆಯ ಒಂದು ಇಣುಕು ನೋಟ

(ಹಿಂದಿನ ಪುಟದಿಂದ)

ಮಾಡಿದರು. ಅವನು ನಿರಾಕರಿಸಿದ. ಸರಿ ಸಂಜೆಅವನಿಗೆ ಯದ್ವಾತದ್ವಾ ಬಡಿತಗಳು ದೊರೆತವು. ಕೊನೆಗೆ ಬಡಿತ ಸಹಿಸಲಾರದೆ ತನ್ನ ಹೆಸರನ್ನು ವಾಪಸ್‌ತೆಗೆದುಕೊಂಡ. ಮತ್ತೊಬ್ಬ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ವೈಸ್ ಪ್ರೆಸಿಡೆಂಟ್ ಅಗಿ ಅಪರೂಪಕ್ಕೆ ಆಯ್ಕೆಯಾದ. ಆ ಕೋಪ ಒಂದು ದಿನ ಹೊರಬಂತು. ಆ ಆಯ್ಕೆಯಾದವನನ್ನು ಒಂದು ದಿನ ಚೆನ್ನಾಗಿ ಥಳಿಸಿ ಪ್ರಜ್ಞಾಶೂನ್ಯನಾದಾಗ ಕಾಲೇಜಿನ ಮುಳ್ಳು ಬೇಲಿಗೆ ತುರುಕಿ ಕೆಲವರು ಪರಾರಿಯಾದರು. ಅನಂತರ ಈ ಜಾತಿವಾರು ಬಡಿದಾಟಗಳನ್ನು ಹತೋಟಿಗೆ ತರಲಾರದೆ ಪ್ರಿನ್ಸಿಪಾಲರು ವಿದ್ಯಾರ್ಥಿಸಂಘವನ್ನೆ ವಿಸರ್ಜಿಸಿದರು. ಈ ಗಲಾಟೆ ಸಂದರ್ಭದಲ್ಲೆ ಪ್ರಗತಿಪರರಾದ ಸವರ್ಣೀಯ ವಿದ್ಯಾರ್ಥಿನಿಲಯ ಪಾಲಕರು 30ಕ್ಕೆ ಬದಲಾಗಿ 69 ಜನ ಹರಿಜನ ವಿದ್ಯಾರ್ಥಿಗಳಿಗೆ ಸೀಟುಕೊಟ್ಟಿದ್ದರು. ಅದೃಷ್ಟಕ್ಕೆ ಆ ವರ್ಷ ಹರಿಜನ ವಿದ್ಯಾರ್ಥಿಗಳ ಮತ್ತು ಹರಿಜನೇತರ ವಿದ್ಯಾರ್ಥಿಗಳ ನಡುವೆ ಸಿಕ್ಕಾಬಟ್ಟೆ ಹೊಡೆದಾಟಗಳಾದುವು. ಈ ಗಲಾಟೆಗಳನ್ನೆಲ್ಲ ಕಂಡ ವಿದ್ಯಾರ್ಥಿನಿಲಯ ಪಾಲಕರು ತಾವು ಉದಾರಿಯಾಗಿ ಹರಿಜನರಿಗೆ ಹೆಚ್ಚು ಸೀಟುಕೊಟ್ಟದ್ದಕ್ಕೆ ಪರಿತಪಿಸಿದರಂತೆ. ನಿರ್ಣಾಯಕ ಘಟ್ಟದಲ್ಲಿ ಸವರ್ಣೀಯರ ಹರಿಜನೋದ್ಧಾರ ಹೇಗೆ ಉಲ್ಟಾ ಆಗುವುದು ನೋಡಿ.

ಮೈಸೂರಿನ ಒಂದು ಕಲಾಕ್ಷೇತ್ರದಲ್ಲಿ ಹರಿಜನ ಜವಾನರ ಮೂಲಕ ಸ್ಪೃಶ್ಯ ಅಧ್ಯಾಪಕರು ಹೋಟೆಲ್‌ನಿಂದ ಕಾಫಿತಿಂಡಿಯನ್ನು ತರಿಸಿಕೊಳ್ಳುವುದಿಲ್ಲವಂತೆ. ಅದೇ ಕಾಲೇಜಿನಲ್ಲಿ ಒಂದು ತರಗತಿಯ ಸಂತೋಷಕೂಟದ ಅಂಗವಾಗಿ ಏರ್ಪಡಿಸಿದ್ದ ಭೋಜನಾ ಸಮಾರಂಭದಲ್ಲಿ ಅಧ್ಯಾಪಕರ ಎದುರಿನ ಸಾಲಿನಲ್ಲಿ ಇಬ್ಬರು ಹರಿಜನ ಜವಾನರು ಕುಳಿತಾಗ ಕೆಲವು ಅಧ್ಯಾಪಕರು ಮತ್ತು ಪ್ರೊಫೆಸರ್‌ಗಳು ಹರಿಜನರ ಎದುರಿನಲ್ಲಿ ಊಟಮಾಡುವುದಿಲ್ಲವೆಂದು ಬೇರೆಕಡೆ ಪವಡಿಸಿದರಂತೆ. ಸವರ್ಣೀಯಳಾದ ನನ್ನ ಸಹ ಅಧ್ಯಾಪಕಿಯೊಬ್ಬಳು ನಮ್ಮ ಮನೆಯಲ್ಲಿ ಏನಾದರೂ ಕಾರ್ಯಕ್ರಮವಿದ್ದರೆ ಊಟಮಾಡಬೇಕಾಗುತ್ತದೆ ಎಂದು ಕಾರ್ಯಕ್ರಮ ಮುಗಿದ ವಾರನೆದಿನ ಬರುತ್ತಾಳೆ. ಊಟಮಾಡುವಷ್ಟು ಮುಂದುವರೆದ ನನ್ನ ಮತ್ತೋರ್ವ ಸಹ ಅಧ್ಯಾಪಕಿ ಊಟದ ಬಗ್ಗೆ ಕಾಮೆಂಟ್ ಮಾಡುತ್ತಾ 'ಅವರ ಜಾತೀಲಿ ಹಾಗೇಂತ ಕಾಣ್ಸುತ್ತೆರೀ' ಎಂದು ಸೇರಿಸುತ್ತಾಳೆ. ಇದೇ ಅಧ್ಯಾಪಕಿ ಮತ್ತೊಮ್ಮೆ ಇತ್ತೀಚಿಗೆ ನನ್ನ ಕೂದಲು ತುಂಬಾ ಉದರೋಗುತ್ತಿದೆಎಂದಾಗ, ನಾನು ವಾಸಿಸುವ ಅಶೋಕಪುರದ ನೀರಲ್ಲಿ ಹೆಚ್ಚು ಕ್ಲೋರಿನ್ ಇರುವುದರಿಂದ ಎಂದು ಹಳದಿ ಉತ್ತರಕೊಟ್ಟಳು! ಈ ಜಾತಿ ಎಲ್ಲಿಂದ ಎಲ್ಲಿಗೋ ನುಸುಳುವುದು. ಮೇಲ್ನೋಟಕ್ಕೆ ಇಲ್ಲದಂತೆ ಕಂಡರೂ ಯಾವುದೊ ರೂಪದಲ್ಲಿ ಎಲ್ಲೋ ಕಾಣಿಸಿಕೊಳ್ಳುತ್ತದೆ.

ಯಾವುದೇ ಒಂದು ಆಫೀಸಿನಲ್ಲಿ ನೋಡಿದರೂ ಅಧಿಕಾರಿ ಹರಿಜನದವನಾಗಿದ್ದು ಕೈಕೆಳಗಿನವರು ಬೇರೆ ಜಾತಿಯವನಾಗಿದ್ದರೆ, ಆ ಅಧಿಕಾರಿಯು ಕೈಕೆಳಗಿನವರನ್ನು ಅವರ ಜಾತಿ ಅಂತಸ್ತಿಗೆ ತಕ್ಕಂತೆ ಸಕಲ ಮರ್ಯಾದೆಗಳೊಡನೆ ವ್ಯವಹರಿಸಬೇಕು. ಇದೇ ಸ್ಥಿತಿಯು ಪಲ್ಟಾಯಿಸಿದರೆ ಸ್ಥಿತಿಯೊಡನೆ ಪ್ರತಿಕ್ರಿಯೆಯೂ ಪಲ್ಟಾಯಿಸದು. ಹರಿಜನ ಜವಾನನು ಬೆನ್ನು ಬಾಗಿಸಿ ಸ್ವಾಮಿ ಬುದ್ಧಿ ಎನ್ನಬೇಕು.

ಇಷ್ಟೆಲ್ಲ ಆಯ್ತಲ್ಲ, ಇನ್ನು ಒಂದು ಆಸ್ಪತ್ರೆಗೆ ಬನ್ನಿ. ನಾಲ್ಕನೆ ದರ್ಜೆಯ ಕೆಲಸಗಳಿಗೆ ಸಮಾಜ ನೀಡಿರುವ ದರ್ಜೆಗನುಗುಣವಾಗಿ ಜನರನ್ನು ನೇಮಿಸಿಕೊಳ್ಳುತ್ತಾರೆ. ಅಂದರೆ ಆಸ್ಪತ್ರೆ ಕಸಗುಡಿಸಲು ಜಾಡಮಾಲಿಯನ್ನೇ ಯಾಕೆ ನೇಮಿಸಿಕೊಳ್ಳಬೇಕು? ಅವನಿಗಿಂತ ಯಾವುದರಲ್ಲೂ ಉತ್ತಮನಾಗಿರದ ಮೇಲ್ಜಾತಿಯವನನ್ನೇಕೆ ಆ ಕೆಲಸಕ್ಕೆ ನೇಮಿಸಿಕೊಳ್ಳುವುದಿಲ್ಲ? ಮತ್ತು ರೋಗಿಗಳನ್ನು ಪರೀಕ್ಷಿಸುವುದಕ್ಕೆ ಮತ್ತು ಒಳ್ಳೆಯ ಔಷದೋಪಚಾರಕ್ಕೂ ಜಾತಿ ಬೇಕೇಬೇಕು. ವೇಷಭೂಷಣ ಮಾತನಾಡುವ ರೀತಿಯಿಂದ ರೋಗಿಯ ಜಾತಿಯನ್ನು ಗುರುತಿಸಲಾಗದಿದ್ದರೆ ಅನಗತ್ಯವಾಗಿ ಡಾಕ್ಟರ್‌ಗಳು ಅಡ್ರೆಸ್ ಕೇಳುತ್ತಾರೆ. ಅದರಿಂದಲೂ ಗೊತ್ತಾಗದಿದ್ದರೆ ಹೆಸರು ಕೇಳುತ್ತಾರೆ. ಅದರಲ್ಲೂ ಸೋತರೆ ಕೊನೆಗೆ ಯಾವ ಜನ ಎಂಬ ನೇರೆ ಪ್ರಶ್ನೆ ಬರುತ್ತದೆ. ಒಮ್ಮೆ ಹೀಗೇ ಆಯಿತು. ನನ್ನ ಹೆಸರು, ಕೆಲಸ, ಸಂಬಳ, ಊರು ಇತ್ಯಾದಿಗಳನ್ನು ಕೇಳಿ ತಿಳಿದುಕೊಂಡ ವೈದ್ಯ ಶಿಖಾಮಣಿಯೊಬ್ಬ ಬಹಳ ಸಂತೋಷ ವ್ಯಕ್ತಪಡಿಸುತ್ತಾ ಉನ್ಮಾದಗೊಂಡವನಂತೆ ಆಡುತ್ತಿದ್ದ. ನನ್ನ ತೊಂದರೆಯ ವಿವರಗಳನ್ನು ಆಲಿಸಿ, ಎಲ್ಲಿ ನಾಲಿಗೆ ತೆಗೆಯಿರಿ ಎಂದ. ಗಂಟಲಿನ ಭಾಗವು ಸ್ಪಷ್ಟವಾಗಿ ಕಾಣಲಿಲ್ಲ. ಆಗ ನನ್ನ ತಲೆಯನ್ನು ಮೇಲಕ್ಕೆ ತಳ್ಳಿದ. ಆ ಕ್ಷಣವೇ ಯಾವ ಜನ? ಎಂಬ ಪ್ರಶ್ನೆ ಬಂತು. ಉತ್ತರ ಕೇಳಿ ಕರೆಂಟ್ ಹೊಡೆಯುವ ತಂತಿಯನ್ನು ಸ್ಪರ್ಶಿಸಿದವನಂತೆ ಕೈತೆಗೆದು ಒಂದು ಕ್ಷಣ ಅಸಹ್ಯ, ಕೋಪ, ಪಶ್ಚಾತ್ತಾಪ ಎಲ್ಲವೂ ಒಟ್ಟಿಗೆ ಆದಂತಾಗಿ ಸ್ತಂಭಿತನಾದ. ಸಾವರಿಸಿಕೊಂಡು ಪುನಃ ಪರೀಕ್ಷಿಸುವ ಗೋಜಿಗೆ ಹೋಗದೆ 'ಸರಿ...ಸರಿ ಕೆಲವು ಗುಳಿಗೆ ಕೊಡುತ್ತೇನೆ' ಎಂದು ನಿಲಕ್ಷ್ಯದಿಂದ ನುಡಿದು ದುಬಾರಿ ಚಾರ್ಜ್‌ಮಾಡಿ ಕುಕ್ಕರಿಸಿದ. ಇಂಥವರಿಗೆ ಹರಿಜನರ ಹಣ ಮಾತ್ರ ಸಹ್ಯ ಆದರೆ ಅವರ ಜಾತಿಯಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಒಂದುಸಲ ಓರ್ವ ಮಹಿಳಾ ರೋಗಿಯು ವೈದ್ಯನು ಹರಿಜನದವನೆಂದು ಪರೀಕ್ಷಿಸಿಕೊಳ್ಳಲು ನಿರಾಕರಿಸಿದಳಂತೆ. ಆವಳಿಗೆ ವೈದ್ಯನ ಜಾತಿ ಮುಖ್ಯವಾಯಿತೇವಿನಹ ಅವನ ವೈದ್ಯವಲ್ಲ. ಮೈಸೂರಿನ ಒಂದು ಖಾಸಗಿ ಆಸ್ಪತ್ರೆಯಲ್ಲಿ ರೋಗಿಗಳನ್ನು ದಾಖಲು ಮಾಡಿಕೊಳ್ಳುವಾಗ ಅವರ ಜಾತಿಗನುಸಾರ ವಾರ್ಡ್‌ಗಳನ್ನು ನಿಶ್ಚಯಿಸುತ್ತಾರೆ. ಆ ಪ್ರಕಾರ ಒಬ್ಬ ಬ್ರಾಹ್ಮಣ, ಲಿಂಗಾಯಿತರು ಇರುವ ವಾರ್ಡಿಗೆ ಹರಿಜನ ರೋಗಿಯನ್ನು ಅಡ್‌ಮಿಟ್ ಮಾಡುವುದಿಲ್ಲ. ಬದಲು ಹರಿಜನರಿಗೆ ಸಮೀಪರಾದ ಹರಿಜನೇತರರ ಕೊಠಡಿಗೆ ಹಾಕುತ್ತಾರೆ. ಇಂಥ ಕೊಠಡಿಗಳಿಗೆ ರಾತ್ರಿ ಡ್ಯೂಟಿಗೆ ಆ ಜಾತಿಯ ಜನರನ್ನೇ ನೇಮಿಸುತ್ತಾರೆ. ಇದೇ ಆಸ್ಪತ್ರೆಯಲ್ಲಿ ಇಂಜಕ್ಷನ್ ಕೊಡಲು ಬಂದ ವೈದ್ಯರು ಅಕಾರಣವಾಗಿ ಹರಿಜನ ರೋಗಿಯನ್ನು ಜಾತಿಕೇಳಿದರು. ಅವರ ದುರದೃಷ್ಟಕ್ಕೆ ಇಂಜಕ್ಷನ್ ಕೊಟ್ಟಾಗಿತ್ತು. ಮಾರನೆಯ ದಿನ ಅವರಿಗೆ ಬದಲಾಗಿ ಒಬ್ಬ ಕ್ರಿಶ್ಚಿಯನ್ ವೈದ್ಯರು ರೋಗಿಯ ಯೋಗಕ್ಷೇಮವ ವಿಚಾರಿಸಲು ಬಂದರು. ಜನಸೇವೆಗೇ ಮೀಸಲಾದ ಆ ಆಸ್ಪತ್ರೆಗಳಲ್ಲೂ ವೈದ್ಯ-ರೋಗಿಯ ಸಂಬಂಧಗಳ ಜಾತೀಯತೆಯ ಕಟ್ಟುಪಾಡುಗಳಿಗೆ ಬದ್ಧವಾಗಿರುತ್ತವೆ. ಮತ್ತೊಂದುಕಡೆ ನಿರುದ್ಯೋಗಿಯಾಗಿದ್ದ ಹರಿಜನ ವೈದ್ಯನಿಗೆ ಒಂದು ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಸಿಕ್ಕಿತು. ತನ್ನ ಕುಟುಂಬದ ಆರ್ಥಿಕ ಬವಣೆ ತಪ್ಪುತ್ತದೆ ಎಂದು ಆ ವೈದ್ಯ ಹುರುಪಿನಿಂದ ಕೆಲಸಕ್ಕೆ ಹಾಜರಾದ. ಆದರೆ ಆ ಹುರುಪು ಹೆಚ್ಚು ದಿನ ಅವನಲ್ಲುಳಿಯಲಿಲ್ಲ. ಕಾರಣ, ಅವನು ಉಳಿದುಕೊಂಡಿದ್ದ ಆಸ್ಪತ್ರೆ ಮೆಸ್‌ನಲ್ಲೂ ಜಾತೀಯತೆಯ ರೂಢಿಗಳು ಜಾರಿಯಲ್ಲಿದ್ದುವು. ಆ ಮೆಸ್‌ನಲ್ಲಿ ಊಟಕ್ಕೆ ಎಲ್ಲರಿಗೂ ಸ್ಟೀಲ್ ತಟ್ಟೆ ಲೋಟಗಳನ್ನು ಕೊಟ್ಟು, ಈ ಹರಿಜನ ವೈದ್ಯನಿಗೆ ಮಾತ್ರ ಅಲ್ಯೂಮಿನಿಯಂ ಲೋಟಗಳನ್ನು ಕೊಡುತ್ತಿದ್ದರಂತೆ. ಅದಕೆ ಈ ವೈದ್ಯನು ಹಸಿವಿನಿಂದ ಸತ್ತರೂ ಚಿಂತೆಯಿಲ್ಲ, ಈ ಕೀಳ್ ರೂಢಿಗಳಿಗೆ ಆಹಾರವಾಗಲಾರೆ ಎಂದು ಕೆಲಸ ಬಿಟ್ಟ. ಇಂಥ ಆಸ್ಪತ್ರೆಗಳು ಹರಿಜನೇತರರಿಗೆ ಸೀಮಿತ ಎಂದು ಬೋರ್ಡ್ ಹಾಕಿಕೊಂಡರೆ ಹರಿಜನ ವಿಚಾರವಂತ ವಿದ್ಯಾವಂತರು ಮಾನಸಿಕ ನೋವನ್ನನುಭವಿಸುವುದು ತಪ್ಪುತ್ತದೆ.

ಹೆಜ್ಜೆ ಹೆಜ್ಜೆಗೂ ಇಂಥ ನೂರಾರು ಉದಾಹರಣೆಗಳನ್ನು ಕೊಡಬಹುದು. ನಗರ ನಾಗರಿಕರ ನಡುವೆ ಜಾತಿವ್ಯವಸ್ಥೆ ಮೇಲ್ನೋಟಕ್ಕೆ ಸಡಿಲವಾಗಿರುವಂತೆ ಕಂಡರೂ ತನ್ನ ಕಪಿಮುಷ್ಟಿಯನ್ನು ಬಿಟ್ಟಿಲ್ಲ, ಮೊದಲೇ ಹೇಳಿದಂತೆ ಹಿಂದೆ ಇದ್ದ ಸಾಂಪ್ರದಾಯಿಕ ಕವಚವನ್ನು ಮಾತ್ರ ಇಂದಿನ ಜಾತಿ ವ್ಯವಸ್ಥೆ ಕಳೆದುಕೊಂಡಿದೆ ಅಷ್ಟೆ.

..........ಕುಂಟುನಡೆ

(ಹಿಂದಿನ ಪುಟದಿಂದ)

ಭಕ್ತಿಗೀತೆಗಳಿಂದ ದಿನ ಪ್ರಾರಂಭವಾಗುತ್ತದೆ. ಒಂದು ಕಡೆ ನಮ್ಮ ನಾಯಕರು ಈ ದೇಶ ಹೊಸ ಜೀವವನ್ನು ಉಸಿರಾಡಬಹುದಲ್ಲ, ಹೊಸ ದೃಷ್ಟಿ ಹರಿಸಬಹುದಲ್ಲ ಎಂದು ರಾಷ್ಟ್ರವನ್ನು ಕ್ರಿಯಾಶೀಲಗೊಳಿಸುವ ಮಾತನಾಡುತ್ತಿದ್ದರೆ, ಆಕಾಶವಾಣಿಯು ಮುಂದಿನಲೋಕಕ್ಕಾಗಿ ಅಷ್ಟು ಇಷ್ಟು ಮಾಡುವ ನಿಷ್ಕ್ರಿಯತೆ, ನಿವೃತ್ತಿ, ತೃಪ್ತಿ ತತ್ವಗಳನ್ನು ಬೋಧಿಸುತ್ತಿರುತ್ತದೆ.

ಈ ತೆರನಾದ ತತ್ವಗಳು ನಮ್ಮನ್ನು ನಿಷ್ಕ್ರಿಯೆಯ ಭಕ್ತರನ್ನಾಗಿ ಮಾತ್ರವಲ್ಲ ಅತ್ಯಾವಶ್ಯಕ ಸ್ವಾರ್ಥಿ ಜನರನ್ನಾಗಿ ಮಾಡಿವೆ. ನಮ್ಮ ಋಷಿಗಳ ಪ್ರಕಾರ ಪ್ರಕಾರ ಪ್ರತಿಯೊಬ್ಬನೂ ಅವನ ಅಥವಾ ಅವಳ ಮುಕ್ತಿಗಾಗಿ ಏನೆಲ್ಲ ಮಾಡಬೇಕೊ ಅದನ್ನು ಮಾಡಬೇಕು. ಅದು ಜೀವನದ ಉದ್ದೇಶ. ಹೀಗೆ ವ್ಯಕ್ತಿಯೊಬ್ಬ ಬದುಕಬೇಕು. ತನ್ನೊಬ್ಬನಿಗಾಗಿ ಕೆಲಸ ಮಾಡಬೇಕು. ಅವನಿಗೆ ಇನ್ನೊಬ್ಬರ ಬಗ್ಗೆ ಅಥವಾ ಒಟ್ಟಂದವಾಗಿ ಸಮಾಜದ ಬಗ್ಗೆ ಯಾವ ಋಣಭಾರವೂ ಇಲ್ಲ. ಋಷಿಗಳು ಸ್ವಾರ್ಥವನ್ನು ಖಂಡಿಸಿದ್ದಿರಬಹುದು. ಆದರೆ ಮತ್ತೊಂದು

(ಮುಂದಿನ ಪುಟಕ್ಕೆ)

ಕುಂಟು ನಡೆ.........

(6ನೇ ಪುಟದಿಂದ)

ವಿಧದಲ್ಲಿ ತಾವೆ ಅದನ್ನು ಪ್ರೋತ್ಸಾಹಿಸುತ್ತಿದ್ದೇವೆಂದು ತಿಳಿಯಲಿಲ್ಲ.


ಹಳೆಯದಕ್ಕೆ ಅಂಟಿಕೊಂಡು ಹೊಸದನ್ನು ದೂರವಿಡುವ ನಮ್ಮ ಸ್ವಭಾವಕ್ಕೆ, ನಮ್ಮ ಜೀವನದ ವಿವಿಧ ಮುಖಗಳನ್ನು ಆಳುವ ಮತ್ತು ನಿರ್ದೇಶಿಸುವ ವ್ಯಾಪಕವಾಗಿ ಹರಡಿದ ಅಸಂಖ್ಯ ಸಂಪ್ರದಾಯಗಳು ಮತ್ತೊಂದು ಕಾರಣವಾಗಿವೆ. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಹಳ್ಳಿಗಾಡಿನ ಪ್ರದೇಶಗಳು ಸಂಪ್ರದಾಯದ ಬಲವಾದ ಕೋಟೆಗಳಾಗಿರುವುದು ಸಹಜವಾಗಿದೆ. ಆದರೆ ಶ್ರೀಮಂತರು, ವಿದ್ಯಾವಂತರು ಅಸಂಖ್ಯಾತವಾಗಿರುವ, ತಾಲ್ಲೋಕು ಮತ್ತು ಪಟ್ಟಣಗಳಲ್ಲೂ ಕೂಡ ಸಂಪ್ರದಾಯದ ಹಿಡಿತವು ಯಾವುದೇ ದೃಷ್ಟಿಯಿಂದಲೂ ನಿಕೃಷ್ಟವಾಗಿಲ್ಲ. ಆಧುನಿಕ ಸಮಾಜಗಳಿಗಿಂತ ಪ್ರಾಚೀನ ಸಮಾಜಗಳಲ್ಲಿ ಸಂಪ್ರದಾಯವು ಬಲಯುತವಾಗಿ ಮತ್ತು ಹೆಚ್ಚು ಧೃಡವಾಗಿತ್ತೆಂದು ಸಮಾಜ ಶಾಸ್ತ್ರಜ್ಞರು ಚೆನ್ನಾಗಿ ಹೇಳಿದ್ದಾರೆ. ಈ ಅಳತೆಗೋಲನ್ನು ನಮಗೆ ಅನ್ವಯಿಸಿದ್ದೇ ಆದರೆ, ನಮ್ಮ ಆಧುನಿಕತೆಯ ಎಲ್ಲ ಹಕ್ಕುಗಳು ಕತ್ತರಿಸಿ ಬೀಳುತ್ತವೆ. ನಮ್ಮಲ್ಲಿ ಲೆಕ್ಕವಿಲ್ಲದಷ್ಟು ಸಂಪ್ರದಾಯಗಳಿದ್ದು ಯಾವುದೇ ಎಣಿಕೆಯ ಮೇಲೆ ವೈಚಾರಿಕಗೊಳಿಸುವುದು ಬಹಳ ಕಷ್ಟವಾಗಿದೆ. ಪ್ರತಿಯೊಂದು ಪೀಳಿಗೆಯಲ್ಲೂ ಸಂಪೂರ್ಣ ಸಾಮಾಜಿಕ ವ್ಯವಸ್ಥೆಯೇ ವಿಚಿತ್ರಗತಿಯಲ್ಲಿ ಪೂಜ್ಯ ಹಾಗು ಗೌರವ ಭಾವನೆಯಿಂದ ಸಂಪ್ರದಾಯಗಳಿಗೆ ಬಾಗಿ ನಮಸ್ಕರಿಸಿದೆ.

ಸಂಪ್ರದಾಯ ಬೇಕೆಂದು ಬಯಸುವ ಯಾವ ಸಮಾಜವೂ ಈ ಪ್ರಪಂಚದಲ್ಲಿಲ್ಲ. ಆದರೆ ಮುಂದುವರಿದ ಜನರೂ ಸಹ ಬದಲಾಗುತ್ತಿರುವ ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪ್ರದಾಯಗಳನ್ನು ರೂಪಿಸಿಕೊಳ್ಳುವುದನ್ನೇ ಆಗಲಿ ವೈಚಾರಿಕಗೊಳಿಸುವುದನ್ನೇ ಆಗಲಿ ಆತ್ಮಪೂರಕವಾಗಿ ಬಯಸುತ್ತಿಲ್ಲ. ಅದು ಈ ಎಲ್ಲ ಸಮಾಜಗಳ ಚಲನಾತ್ಮಕತೆಯನ್ನು ತೋರಿಸುತ್ತದೆ. ಏನೇ ಆಗಲಿ ನಮ್ಮ ಸಂಪ್ರದಾಯಗಳು ನಮಗೆ ಧರ್ಮಭೀತಿಗಳಾಗಿವೆ. ಅವುಗಳ ಅನುಸರಣೆಗೆ ಅನುಗುಣವಾಗಿ ನಮ್ಮನ್ನು ಹೊಂದಿಸಿಕೊಳ್ಳಬೇಕು. ನಮ್ಮ ಜೇಬುಗಳು ನಮ್ಮನ್ನು ಬಿಡಲಿ ಬಿಡದೆ ಇರಲಿ ಆದರೆ ಈ ಸಾಮಾಜಿಕ ಕೃತಕಗೌರವದ ಭಾವನೆಯನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ. ಮತ್ತು ನಮ್ಮ ಸಂಪ್ರದಾಯಕ್ಕೆ ಹೊಂದಿಕೊಂಡಿರುವ ದುಬಾರಿಯ ವ್ರತನಿಯಮಗಳು ಸಾಲಸೋಲದಿಂದಲಾದರೂ ನಡೆಯಬೇಕಾಗಿದೆ.

ಪ್ರಗತಿ ಪಥದಲ್ಲಿ ನಮಗಾಗಿರುವ ನಿಂದನಾತ್ಮಕ ಸೋಲಿಗೆ ಎದ್ದು ಕಾಣುವ ಮತ್ತೊಂದು ಕಾರಣವೆಂದರೆ, ನಾವು ಬರೀ ಮಾತಿನ ಜನರು. ಅದು ನಮ್ಮ ದ್ವಿತೀಯ ಪ್ರಮುಖ ಪ್ರವೃತ್ತಿಯಾಗಿದೆ. ಎಲ್ಲಾ ವಸ್ತುಗಳ ಮೇಲೆ ಹಾಗು ಎಲ್ಲಾ ವಿಷಯಗಳ ಮೇಲೆ ನಾವು ಮಾತನಾಡುತ್ತೇವೆ. ಮತ್ತು ನಮ್ಮ ಶಕ್ತಿಯನ್ನೆಲ್ಲ ಹಾಳುಮಾಡುತ್ತೇವೆ. ಅರ್ಥವಿರಲಿ ಇಲ್ಲದಿರಲಿ, ನಾಯಕರು, ಜನರು, ವಿದ್ಯಾರ್ಥಿಗಳು ಒಟ್ಟಿನಲ್ಲಿ ಇಡೀ ರಾಷ್ಟ್ರವೇ ಮಾತನಾಡುತ್ತದೆ. ಅದರಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಮನಶ್ಶಾಸ್ತ್ರಜ್ಞರು ಈ ಅಂಶವನ್ನು ಸಾಧ್ಯವಾದರೆ ವಿವರಿಸಲು ಪ್ರಯತ್ನಿಸಬೇಕು. ಒಂದು ಪಕ್ಷ ನಾವು ಇಂಥ ರೂಢಿಯಿಂದ ಮುಕ್ತರಾಗಿ ನಮ್ಮ ಶಕ್ತಿ ವ್ಯಯ ಮಾಡದೆ ಅದನ್ನು ರಚನಾತ್ಮಕ ಉದ್ದೇಶಗಳಿಗೆ ಉಪಯೋಗಿಸಿದ್ದೇ ಆದರೆ ಬಹುಶಃ ನಮ್ಮ ಪ್ರಗತಿ ಹೆಜ್ಜೆಗಳು ತೀವ್ರವಾಗಬಹುದು.

ಕೇವಲ ನಾಲಿಗೆಯ ವ್ಯವಹಾರದಲ್ಲಿಯೇ ನಾವು ಹೆಚ್ಚು ತೊಡಗಿರುವುದರಿಂದ ಬಯಸದ ಅನೇಕ ತೊಂದರೆಗಳ ಬಲೆಗಳಲ್ಲಿ ಸಿಕ್ಕಿಕೊಂಡಿದ್ದೇವೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಎಲ್ಲಾ ಕಾಲದಲ್ಲೂ ಎಲ್ಲಾ ವಿಷಯಗಳ ಮೇಲೆ ಮಾತನಾಡಬಹುದೆಂಬ ಹಕ್ಕನ್ನು ಸೂಚಿಸುವುದಿಲ್ಲ. ಯಾವಾಗ ಮಾತನಾಡಬೇಕೊ ಮತ್ತು ಎಲ್ಲಿ ಸಂದರ್ಭದ ಒತ್ತಡವಿದೆಯೋ ಆಗ ಮಾತ್ರ ಮಾತನಾಡಬೇಕು.

ನಮ್ಮ ಸಮಾಜದಲ್ಲಿ ಕಂಡುಬರುವ ಎಲ್ಲ ಜಡತ್ವಕ್ಕೂ ಇವು ಕೆಲವು ನಿಶ್ಚಿತ ಕಾರಣಗಳಾಗಿವೆ. ಮತ್ತು ಅವು ನಮ್ಮ ಸಾಮಾಜಿಕ ವ್ಯವಸ್ಥೆಯ ಜೀವಸತ್ವವನ್ನೇ ತಿನ್ನುತ್ತಿವೆ. ಕೇವಲ ತಾವು ದೊಡ್ಡವರೆಂದು ಭಾವಿಸುವ ಜನ ನಮ್ಮ ಸಂಪೂರ್ಣ ಕಟ್ಟಡವು ಸಾವಿರಾರು ವರ್ಷಗಳ ಹಿಂದಿನ ಭದ್ರ ಅಡಿಪಾಯದ ಮೇಲೆ ನಿಂತಿದೆ ಎಂದು ನಂಬುತ್ತಾರೆ. ಅಂತಹ ಅಭಿಪ್ರಾಯಗಳು ಆಗಾಗ್ಗೆ ನಮ್ಮನ್ನು ತಪ್ಪು ದಾರಿಗೆ ಎಳೆದಿವೆ. ಹಾಗೆಯೇ ಇಂದಿಗೂ ಎಸೆಯುತ್ತಿವೆ. ಆದರೆ ಪ್ರತಿಯೊಬ್ಬನೂ ತನ್ನಲ್ಲಿ ಆಳವಾಗಿ ಬೇರೂರಿರುವ ನೋವನ್ನು ತಿಳಿಯಲು ಮತ್ತು ರಾಷ್ಟ್ರವನ್ನು ಪುನರುಜ್ಜೀವನಗೊಳಿಸಲಿಕ್ಕಾಗಿ ಅವಶ್ಯಕವಾದ ಕ್ರಮ ತೆಗೆದುಕೊಳ್ಳಲು ಕಾಲವೀಗ ಪಕ್ವವಾಗಿದೆ.



ಮುಂಚಯ್ಯ



ಗಣೇಶಮೂರ್ತಿ

ಈ ದಲಿತ ಕೋಗಿಲೆಗಳ ಗುರುತಿಸುವವರಾರು?

ಅದೊಂದು ದಲಿತರ ಹಾಸ್ಟೆಲು. ಅಲ್ಲಿ ಒಮ್ಮೆ ಕುಳಿತಿದ್ದೆ. ಇದ್ದಕ್ಕಿದ್ದಂತೆ ಡಾ|| ಅಂಬೇಡ್ಕರ್ ಕುರಿತ ಹಾಡೊಂದು ಕೇಳಿಸಿತು. ಬಹಳ ಇಂಪಾದ ವೇದನೆ ಭರಿತರಾಗ ಹಾಗೇ ಕರಗಿತು. ಇಷ್ಟವಾಗಿ ಹಾಡು ಕೇಳಿಸುತ್ತಿದ್ದ ರೂಮಿಗೆ ಹೋದೆ. ನಸುಗಪ್ಪು ಬಣ್ಣದ ಇಪ್ಪತ್ತು ದಾಟದ ಇಬ್ಬರು ಯುವಕರು ಎದುರುಬದುರಿಗೆ ಕೂತಿದ್ದರು. ನಾನು ಬಾಗಿಲು ತಳ್ಳುತ್ತಲೆ, ಬನ್ನಿ ಅನ್ನುತ್ತ ಎದ್ದರು. ಹಾಡು ಬಹಳ ಚೆನ್ನಾಗಿತ್ತು ಅನ್ನುತ್ತ ಕೂತೆ. ಇಬ್ಬರಲ್ಲಿ ಒಬ್ಬರು ಎಚ್. ಮುಂಚಯ್ಯ. ಮತ್ತೊಬ್ಬರು ಗಣೇಶಮೂರ್ತಿ.

ಇದೀಗ ಕಡೆಯ ಬಿ.ಎ. ಮುಗಿಸಿದ ಮುಂಚಯ್ಯ ಹುಟ್ಟಿದ್ದು ಹಳ್ಳೀಲಿ–ಹಿಟ್ನಳ್ಳಿಕೊಪ್ಪಲು. ಬೆಳೆದದ್ದು ಪಟ್ಟಣದಲ್ಲಿ. ಓದು ಮಹಾರಾಜ ಕಾಲೇಜಿನಲ್ಲಿ. ಗಣೇಶಮೂರ್ತಿ ಹುಟ್ಟಿದ್ದು ಸುಮಾರಾದ ಪಟ್ಟಣದಲ್ಲಿ (ಟಿ ನರಸೀಪುರ). ವಿದ್ಯಾಭ್ಯಾಸ ಪ್ರಾರಂಭವಾದದ್ದು ಮೈಸೂರಲ್ಲಿ. ಈಗ ಮಹಾರಾಜ ಕಾಲೇಜಿನಲ್ಲಿ ನಡುವಿನ ಬಿ. ಎ. ಮುಗಿಸಿದ್ದಾರೆ.


ದಲಿತ ಜಾತಿಯವರಾದ ಇವರು ಎರಡು ವರ್ಷದಿಂದ ಮೈಸೂರಲ್ಲಿ ನಡೆದ ಎಲ್ಲಾ ರೀತಿಯ ಗೀತೆ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಸವರ್ಣೀಯರ ನಡುವೆ ಬಹುಮಾನ ಗಿಟ್ಟಿಸಿರುವರು.

ಸ್ವರ್ಣವರಿಂದಲೂ ಹಾಡು ಹೇಳುವುದರಲ್ಲಿ ಮುಂದೆ ಕಾಣುವ ಇವರ ಹಿರಿಯರೂ ರಾಗ ತಾಳಗಳ ಲಯಕ್ಕೆ ಬಿದ್ದವರೇ. ನಾಟಕಗಳಲ್ಲಿ ಕಂದ ಹಾಡಲಿಕ್ಕೆ ಎತ್ತಿದ ಕೈ ಎನಿಸಿದ ಈ ಈರ್ವರ ಹಿರಿಯರು ತಮ್ಮ ಜೀವಿತವನ್ನು ಕತ್ತಲಲ್ಲೇ ಕಳೆದವರು.

ಸುಮಾರಾಗಿ ಬೆಳಕನ್ನು ಕಾಣುತ್ತಿರುವ ಈ ದಲಿತ ಕೋಗಿಲೆಗಳೆರಡು ಹಿಂದೆ ಸರಿಯದಂತಾಗಲಿ. ಮೇಲ್ವರ್ಗದವರು ಅಥವಾ ಜಾತಿಯವರು ಎಲ್ಲದರಲ್ಲೂ ಮುಂದೆ ಬರದಂತೆ ತಡೆಯೊಡ್ಡುವ ಈ ದೇಶದಲ್ಲಿ ಇವರನ್ನಿಗಳು ಆ ಎಲ್ಲರ ಮಟ್ಟಕ್ಕೆ ಬರಲಿ, ಅವರನ್ನು ಮೀರಿಸಲಿ. ಮಾನವೀಯತೆಯ ಈ ಇಬ್ಬರು ದಲಿತ ಕೋಗಿಲೆಗಳ ಪ್ರತಿಭೆಯನ್ನು ಗುರುತಿಸುವವರು ಯಾರು?

......

ದಲಿತರನ್ನು ಕಿತ್ತು ತಿನ್ನುವ ಸಮಸ್ಯೆಗಳಲ್ಲಿ ತಮ್ಮ ಮೇಲಿನ ಅಭಿಮಾನದ ಅಭಾವವೂ ಕೂಡ ಒಂದು. ಇದನ್ನು ಬರಿಸುವಲ್ಲಿ ಪಂಚಮ ಶ್ರಮಿಸುತ್ತದೆ. ವಿವಿಧರಂಗಗಳಲ್ಲಿ ಪ್ರತಿಭೆ ಪಡೆದ ದಲಿತರನ್ನು ಪರಿಚಯಿಸಲು ಈ ಅಂಕಣ ಮೀಸಲಿದೆ. ಸಂಬಂಧಿಸಿದವರು ವ್ಯವಹರಿಸಿ ಸಹಕರಿಸಿ. -ಸಂ



ಹೆಣ್ಣುಜಾತಿ ಮತ್ತು ದಲಿತಜಾತಿ

ಮುಂದೆ ಹೇಳುವಂಥವುಗಳು ದಿನಕ್ಕೆ ಎಷ್ಟಾಗುತ್ತವೊ ಏನೊ. ಈಗ ಒಂದು ನೆನಪಿಗೆ ಬರುತ್ತಿದೆ. ನನಗೆ ಪರಿಚಿತ ಹುಡುಗಿಯೊಬ್ಬಳು ಒಂದು ದಿನ ಪ್ಯಾಂಟು ಹಾಕಿಕೊಂಡು ಬಂದಳು. ಇದನ್ನು ಕಂಡಾಗ ನನ್ನ ಗೆಳೆಯರನೇಕರಿಗೆ ಒಳಗೊಳಗೇ ಕಸಿವಿಸಿಯಾಯಿತು. ಒಬ್ಬ ಹೊಟ್ಟೆ ಒಳಗಿನದನ್ನು ಹೊರಕ್ಕೆ ಕಕ್ಕಿದ- "ಬಹಳ ಧಿಮಾಕಿನವಳು" ಅಂದ. ಅನೇಕರು ಆ ಹುಡುಗಿಯನ್ನು ವಕ್ರ ವಕ್ರವಾಗಿ ನೋಡಿದರು. ಆ ಹುಡುಗಿ ಪ್ಯಾಂಟು ಹಾಕಿಕೊಂಡು ಬಂದುದಕ್ಕೆ ಹುಡುಗರು ತಮ್ಮಿಂದ ಏನೊ ಕಳೆದು ಹೋದಂತೆ ವರ್ತಿಸಿದರು. ಏನಿಲ್ಲ ಎತ್ತಿಲ್ಲ ಆ ಹುಡುಗಿ ಪ್ಯಾಂಟು ಹಾಕಿದ್ದಕ್ಕೆ ಯಾಕೆ ಧಿಮಾಕಿನವಳು? ಹುಡುಗರಿಂದ ಏನು ಕಳೆದು ಹೋಯಿತು? ನನಗೆ ಎಷ್ಟು ಹುಡುಕಿದರೂ ಏನೂ ಕಾಣಲಿಲ್ಲ.

ಆ ಹುಡುಗಿ ಪ್ಯಾಂಟು ಹಾಕಿಕೊಂಡದ್ದಕ್ಕೆ ಸಿಕ್ಕಂಥ ಮೂಗೇಟೆ ಅಸ್ಪೃಶ್ಯ ಜಾತಿಯರಿಗೆ ಸ್ವಲ್ಪ ಟಿಪ್ ಟಾಪ್ ಆಗಿದ್ದರೆ ಸಿಕ್ಕುತ್ತದೆ. ಒಬ್ಬ ಹರಿಜನರವ ಶೋಕಿಯಾಗಿದ್ದರೆ ಅವನಿಗೆ ನೂರೆಂಟು ಕಾಮೆಂಟು ಕಟ್ಟಿಟ್ಟದ್ದು. ಅವನು ಸವರ್ಣೀರಯ ಕಣ್ಣಲ್ಲಿ ಧಿಮಾಕಿನವನಾಗುತ್ತಾನೆ. ಅವನು ಒಳ್ಳೆಯ ಫ್ಯಾಷನ್ನು ಬಟ್ಟೆ ಹಾಕಿಕೊಂಡರೇ ಆತನ ಯೋಗ್ಯತೆ ಕೆಟ್ಟದಾಗಿ ಬಿಡುತ್ತದೆ. ಒಬ್ಬ ಹರಿಜನ ವಿದ್ಯಾರ್ಥಿಗೆ ಅವರ ಪ್ರಿನ್ಸಿಪಾಲರು - "ಏನ್ರಿ ಷೆಡ್ಯೂಲ್ಡ್ ಕ್ಯಾಸ್ಟ್ ಅಂತೀರಿ! ಇಷ್ಟು ಮಾಡ್ರನ್ ಬಟ್ಟೆ ಹಾಕ್ತಿರಲ್ಲ!" ಎಂದರಂತೆ!! ಒಟ್ಟಲ್ಲಿ ಹರಿಜನರು ಯೋಗ್ಯರಾಗಿರಬೇಕಾದರೆ ಅವರು ದೀನರಾಗಿರಬೇಕು. ಹೆಂಗಸೂ ಯೋಗ್ಯಳಾಗಿರಬೇಕಾದರೆ ಅವಳೂ ದೀನಳಾಗಿರಬೇಕು. ಹೆಂಗಸರೂ ದಲಿತರೂ ಸವರ್ಣೀಯರ ನೆರಳಿನ ಅಂಕದಲ್ಲಿ ಚಲಿಸಾಡ ಬೇಕು. ಕಿತ್ತುಕೊಂಡು ಹೆಂಗಸರೂ ದಲಿತರೂ ಸ್ವತಂತ್ರ ಹೆಜ್ಜೆ ಇಟ್ಟರೆ ಸವರ್ಣೀಯ ಮನಸ್ಸು ತನ್ನದೇನೊ ಕಳೆದು ಹೋದಂತೆ ಪರಿತಪಿಸುತ್ತದೆ. ಪರಿಸ್ಥಿತಿಯಿಂದಾಗಿ ಬದಲಾವಣೆಯಿಂದಾಗಿ ದಲಿತರು ಹೆಂಗಸರು ಸವರ್ಣೀಯರ † ತಪ್ಪಿದರೆ ಅದಕ್ಕಾಗಿ ಅವರು ಮುಷ್ಪಾಗಿ ಗೊಣಗುವರು, ಅಸಹಾಯಕರಾಗಿ.

ಈ ಒಂದು ಅನ್ನದ ಅಗುಳನ್ನು ಚಿವುಕಿ ಏನೆಂದು ನೋಡುತ್ತಿರುವೆ. ಹೆಂಗಸರ, ದಲಿತರ ಪ್ರಗತಿಯನ್ನು ಯಾಕೆ ಸವರ್ಣೀಯ ಮನಸ್ಸು ಸಹಿಸುವುದಿಲ್ಲ ಎಂಬುದಕ್ಕೆ ಇತಿಹಾಸವೇ ಇದೆ. ಇರಲಿ. ಆದರೆ ಮೇಲಿನಂಥ ಅಸಹನೆಯ ಭಾವನೆಗಳೂ ಅಂತರಂಗಿಕವಾಗಿ ಪ್ರಗತಿಪರ ವ್ಯಕ್ತಿ, ಪಕ್ಷಗಳಲ್ಲೂ ಇವೆ ಎಂಬ ವಿಷಾದಕ್ಕೆ ಈಗ ಬರೋಣ. ಕೆಲವು ಪ್ರಗತಿಪರ ವ್ಯಕ್ತಿಗಳು, ಪಕ್ಷಗಳು, ಹೆಚ್ಚಾಗಿ ವರ್ಗ ಹೋರಾಟ ಪ್ರತಿಪಾದಿಸುವ ಕಮ್ಯುನಿಷ್ಟರು 'ದಲಿತರ ಬಿಡುಗಡೆ ವರ್ಗ ಹೋರಾಟದಲ್ಲೆ' ಎಂದು ಮಾತಾಡುವರು. ವರ್ಗಹೋರಾಟದಲ್ಲಿ ದಲಿತರ ಭಾಗವಹಿಸುವಿಕೆ ಇಲ್ಲದಿದ್ದರೆ, ದಲಿತರ ನಾಯಕತ್ವ ಇಲ್ಲದಿದ್ದರೆ ಆ ವರ್ಗ ಹೋರಾಟವೇ : ಮುಂದಕ್ಕೆ ನೂಕಲ್ಪಡುತ್ತಾನೆ ಎಂಬ ನಿಜದ ಅರಿವಿಲ್ಲದವರು ಇಂಥ ಮಾತಾಡುವರು. ಇಂಥ ಮಾತನ್ನೇ ಹಿಂದೆ ಚೈನಾದಲ್ಲೂ ಮಾತಾಡಿದ್ದರು. ಮಹಿಳೆಯರ ಬಿಡುಗಡೆಯ ಪ್ರಶ್ನೆ ಬಂದಾಗ ಅಲ್ಲಿನ ಕೆಲವು ಸಂಪ್ರದಾಯವಾದಿ ಕಮ್ಯುನಿಷ್ಟರು 'ವರ್ಗ ಹೋರಾಟದೊಡನೆ ಮಹಿಳೆಯರ ಬಿಡುಗಡೆಯೂ ತಂತಾನೆ ಆಗುತ್ತದೆ' ಎಂದು ವಾದಿಸಿ ಪ್ರತ್ಯೇಕ ಮಹಿಳಾ ಹೋರಾಟದ ಅಗತ್ಯವನ್ನು ನಿರಾಕರಿಸಿದ್ದರು. ಈ ವಾದವನ್ನು ನಿಜವಾದ ಕಮ್ಯುನಿಷ್ಟರು ಅಲ್ಲೆ ಅಲ್ಲಗಳೆದು, ಇಂಥ ದೃಷ್ಟಿ ಕೋನಕ್ಕೆ 'ಬಹಿರಂಗವಾಗಿ ಪ್ರಗತಿಪರ ಅಂತರಂಗಿಕವಾಗಿ ಪ್ರಗತಿವಿರೋಧಿ' ಎಂದು ವಿವರಿಸಿ ನಿಜ ಕಾಣಿಸಿದರು. ಚೈನಾದಲ್ಲಿ ಹೆಂಗಸರ ಬಿಡುಗಡೆ ಬಗ್ಗೆ ಸಂಪ್ರದಾಯವಾದಿ ಕಮ್ಯುನಿಷ್ಟರು ತಳೆದಿದ್ದ ಭಾವನೆಗೂ ಇಲ್ಲಿ ಅಂದರೆ ಇಂಡಿಯಾದಲ್ಲಿ ಕಮ್ಯುನಿಷ್ಟರು ತಳೆದಿರುವ 'ದಲಿತರ ಬಿಡುಗಡೆ ವರ್ಗ ಹೋರಾಟದಲ್ಲೆ' ಎಂಬ ನಿಲುವು 'ಬಹಿರಂಗವಾಗಿ ಪ್ರಗತಿಪರವಾಗಿದ್ದು ಆಂತರಿಕವಾಗಿ ಪ್ರಗತಿವಿರೋಧಿ'ಯಾಗಿ ಸ್ಪಂದನವಿಲ್ಲದ 'ಸಾಂಪ್ರದಾಯಿಕ ಕಮ್ಯುನಿಷ್ಟರ' ನಿಲುವು ಆಗುತ್ತದೆ ಎಂಬುದಕ್ಕೆ ಇದು ಸೂಕ್ತ ಉದಾಹರಣೆಯಾಗುತ್ತದೆ. ಚೈನಾದಲ್ಲಿ ಮಹಿಳಾ ಬಿಡುಗಡೆ ಬಗ್ಗೆ ಕಮ್ಯುನಿಷ್ಟರು ಪ್ರಗತಿ ಪರರಾದರೂ ಗಂಡಸಾದ್ದರಿಂದ ಒಳಗೊಳಗೇ ಸಂಪ್ರದಾಯವಾದಿಗಳಾಗಿ 'ಆಂತರಿಕವಾಗಿ ಪ್ರಗತಿ ವಿರೋಧಿ' ಗಳಾದಂತ ಇಲ್ಲಿ ದಲಿತರ ಬಗ್ಗೆ ಕಮ್ಯುನಿಷ್ಟ್ ನಾಯಕರು ಪ್ರಗತಿಪರರಾದರೂ ಮೇಲ್ಜಾತಿ ಮೇಲ್ವರ್ಗಕ್ಕೆ ಸೇರಿದವರಾದ್ದರಿಂದ ಸಂಪ್ರದಾಯವಾದಿಗಳಾಗಿ 'ಆಂತರಿಕವಾಗಿ ಪ್ರಗತಿ ವಿರೋಧಿ'ಗಳಾಗುವುದನ್ನೂ ಅರ್ಥ ಮಾಡಿಕೊಳ್ಳಬಹುದು. ಇದನ್ನು ಈ ಪ್ರಗತಿಪರರ ಒಳಗೊಳಗೇ ಇರುವ ವರ್ಗಾಸಕ್ತಿ ಎನ್ನಬಹುದು. ಈ ಪ್ರಗತಿಪರರು ತಮ್ಮ ಪೊರೆ ಕಳಚಿ ಹೊಸ ಹುಟ್ಟು ಪಡೆಯ ಬೇಕಾಗಿದೆ. ಯಾರ ಪೊರೆ ಕಳಚಲಿ ಬಿಡಲಿ, ಹೆಣ್ಣು ಜಾತಿಯೂ ದಲಿತ ಜಾತಿಯೂ ಕೈಕೈ ಹಿಡಿದು ತಮ್ಮ ಬಿಡುಗಡೆಗೆ ಮುನ್ನಡೆಯಬೇಕಾಗಿದೆ.

—ಕಿಡಿಗೇಡಿ

(ಮೊದಲ ಪುಟದಿಂದ)

ಮೊನ್ನೆ ತಾನೆ ಪ್ರಾಣಹೋಗುವಂತೆ ತಮ್ಮ ಮೇ[illegible] ದಾಂದಲೆ ನಡೆಸಿದ್ದ ಸವರ್ಣಿಯರಿಂದಲೇ ಇಂದು ಸಂಧಾ[illegible] ನ ಸಭೆ ಏರ್ಪಡುತ್ತಿರುವುದ ಕಂಡು ಹರಿಜನರಿಗೆ ಭಯ ಉಂಟಾಗಿತ್ತು. "ಈಗ 'ರಾಜಿ'ಅಂದು ನಾಳೆ ನಮ್ಮ ಪ್ರಾಣ ತೆಗೆಯುತ್ತಾರೆ" ಎಂದು ತಿಳಿದಿದ್ದ ಹರಿಜನರಿ[illegible] ಈ 'ಸಂಧಾನ' ಹಿಡಿಸಿರಲಿಲ್ಲ. ಆದರೆ ಮೆಲೀನ ಮುಖ್ಯಸ್ಥರೆಲ್ಲರು ಮೊದಲೇ ಕೇರಿಗೆ ಬಂದು ಒತ್ತಾಯಿಸಿದ್ದರಿಂ[illegible] ಸಭೆಗೆ ಬರಬೇಕಾಯಿತು.

ತಹಸಿಲ್ದಾರರು "ಕೆಲಸವಿದ್ದರೂ ಅವಕಾಶ ಮಾಡಿಕೊಂಡು"ಬಂದ ಇತರ ಮುಖ್ಯಸ್ಥರನ್ನು ಸ್ವಾಗತಿಸಿದರು. ಅಧ್ಯಕ್ಷರು ಸಂಧಾನ ಅಗತ್ಯ ಎಂದು ಭಾಷಣ ಮಾಡಿದರು. ನಂತರ ತಲೆತಗ್ಗಿಸಿ ಕೂತಿದ್ದ ಒಂದಷ್ಟು ಹರಿಜನರನ್ನು 'ಏನ್ ನಡೀತು..ನಿಮಗೇನ್ ಕಷ್ಟ' ಎಂದು ಮುಖ್ಯಸ್ಥರು ಕೇಳಿದರು. ಹರಿಜನರ ಚಿಕ್ಕಪುಟ್ಟಯ[illegible] ಅವರು ಎದ್ದು ನಿಂತು ಸವರ್ಣೀಯರು ತಮ್ಮ ಮೇ[illegible] ದೌರ್ಜನ್ಯ ನಡಿಸಿದ್ದು-ಸಿಕ್ಕಸಿಕ್ಕಲ್ಲಿ ತಮ್ಮನ್ನು ಥಳಿಸಿದ್ದು ತಮ್ಮ ಇದ್ದ ಬದ್ದ ಪದಾರ್ಥಗಳ ಲೂಟಿಮಾಡಿದ್ದು ಮನೆಗಳಿಗೆ ನುಗ್ಗಿ ಹೆಂಗಸರನ್ನು ಥಳಿಸಿದ್ದು, ಗಾಡಿಗಳ[illegible] ಸುಟ್ಟದ್ದು, ಬಿಳಿಗೌಡರು 'ಸರ್ಕಾರಿ ಜನಿವಾರ ಹಾಕಿಸ್ತಿನಿ' ಎಂದದ್ದನ್ನು, ದುಃಖದಿಂದ ತೋಡಿಕೊಂಡರು. ಇದಾದನಂತರ ಸಭೆಯ ಮುಖ್ಯಸ್ಥರು ಒಬ್ಬೊಬ್ಬರಾ[illegible] ಭಾಷಣ ಮಾಡುತ್ತಾ 'ನಡೆದದ್ದನ್ನು ಮರೆಯಬೇಕೆಂದು' ತಲೆತಗ್ಗಿಸಿ ಕೂತಿದ್ದ ಹರಿಜನರಿಗೆ ಮತ್ತು ನೆರೆದಿದ್ದ ಸವರ್ಣೀಯರಿಗೆ ಉಪದೇಶ ಮಾಡಿದರು. 'ಯಂಗ್ ಮ[illegible] ರಿಯುಕಯ್ತದೆ..ಸ್ವಾಮಿ' ಎಂದು ಅಲಾಪಿಸುತಿದ್ದ ಒಬ್ಬ ಹರಿಜನದವನ ಮಾತು ಸಭೆಯ ಗಮನಕ್ಕೆ ಬರಲೇಇಲ್ಲ. ಎಲ್ಲರನಂತರ ಮಾತನಾಡಿದ ಬೀಳೀಗೌಡ ಎಂ.ಎಲ್.[illegible] ಅವರು 'ಸಂಧಾನ ಮಾಡಿಕೊಳ್ಳಬೇಕೆ'ಂದೂ ಇಲ್ಲದಿದ್ದ[illegible] 'ಮುಂದೆಯೂ ಇದೇರೀತಿ ಅಗಬಹುದು' ಎಂದು ಹೇ[illegible] ಭಾಷಣ ಮುಗಿಸಿದರು.

ಎಲ್ಲಾ ಆದನಂತರ ಸಂಧಾನಕ್ಕೆ ಹರಿಜನರ ಕೈಲಿ ಸಹಿ ಹಾಕಿಸಿಕೊಳ್ಳುವ ಯೋಜನೆ ಇತ್ತು. ಆದರೆ ನೋವನ್ನನುಭವಿಸಿದ್ದ ಹರಿಜನರಾರೂ ಸಂಧಾನಕ್ಕೆ ಸಿದ್ಧರಿರಲಿಲ್ಲ. 'ಸಂಧಾನ ಸಭೆಯ' ಈ ಎಲ್ಲಾ ಅಟಾಟೋಪಗಳನ್ನು ನೋಡಿ ಕೇವಲ ವಿಷಯ ಸಂಗ್ರಹಕ್ಕಷ್ಟೇ ಹೋಗಿದ್ದ ನಾವೂ ಮಾತಾಡಬೇಕಾಯಿತು. 'ಹರಿಜನರಿಗೆ ಒಪ್ಪಿ[illegible] ಇಲ್ಲದ ಈ ಸಂಧಾನ ಸರಿಯಲ್ಲವೆಂದೂ, ಅಧಿಕಾರಿಗಳ[illegible] ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದೂ' ಹೇಳಿದೆವು. ಒಂ[illegible] ಷ್ಟು ಸಣ್ಣಕೆ ಗಲಾಟೆಯಾಯ್ತು ನಂತರ ಲಾಯರ್ ಟಿ.ಚನ್ನೇಗೌಡರು ಮೇಲೆದ್ದು 'ನೀವೆಲ್ಲಿಯವರು?' ಎಂದರು. 'ಮೈಸೂರು' ಎಂದೆವು. 'ಬೇರೆ ತಾಲೋಕಿನವರಿಗೆ ಇದನ್ನ ಕೇಳಲು ಅಧಿಕಾರ ಇಲ್ಲ' ಎಂದು ಕೂಗಾಡಿದರು. 'ಏಕೆ?' ಎಂದು ನಾವು ಕೇಳುವಷ್ಟರಲ್ಲಿ ಕುಂತಿದ್ದ ಜನರೆಲ್ಲ ಮೇಲೆದ್ದು ಗಲಾಟೆಯಾಯ್ತು. ಒಂದಷ್ಟು ಜನ ನಮ್ಮನ್ನು ಹಿಡಿದುಕೊಳ್ಳಲು, ಥಳಿಸಲು ಷುರು ಮಾಡಿದರು. ಅಷ್ಟರಲ್ಲಿ ಸಬ್ ಇನ್ಸ್‌ಪೆಕ್ಟರ್ ಅವರು ನಮ್ಮನ್ನು ಸಭೆಯಿಂದ ಹೊರ ಹಾಕಿಸಿದರು.

ಸಂಪಾದಕ : ಇಂಧೂದರ ಹೊನ್ನಾಪುರ
ಜೊತೆಗೆ : ರಾಮದೇವ ರಾಕೆ
ಶಿವಾಜಿ ಗಣೇಶನ್
ಶಿವಮಲ್ಲ ದೇವನೂರು

ಪ್ರಕಾಶಕ : ಗೋವಿಂದಯ್ಯ, ೫೧೬, ೧೫ನೇ ಮೇಯಿನ್ ರಸ್ತೆ, ಸರಸ್ವತಿಪುರಂ, ಮೈಸೂರು-9 ಮುದ್ರಣ : ಆಂದೋಲನ ಮುದ್ರಣ, ಮೈಸೂರು-9